# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038








ಸಂಪುಟ:02 • ಸಂಚಿಕೆ: 42 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 08.08.2024 • ಗುರುವಾರ • ಪುಟ:04 • ಬೆಲೆ:2
Volume:02 • Issue: 42 • PRGI No:KARKAN/2023/88055 • VIJAYANAGARA • 08.08.2024 • Thursday • Page:04 • Rs:2







# 36 ಪೊಲೀಸ್ ಗೃಹ ನಿರ್ಮಾಣಕ್ಕೆ ಭೂಮಿ ಪೂಜೆ

## ಡಿಎಆರ್ ಘಟಕದ ಆಡಳಿತ ಕಟ್ಟಡ, ಪೊಲೀಸ್ ಪರೇಡ್ ಮೈದಾನ ಲೋಕಾರ್ಪಣೆ

## ಎಸ್ಪಿ ಹರಿಬಾಬು ಮತ್ತು ತಂಡದವರ ಕಾರ್ಯ ಅತ್ಯುತ್ತಮ ಎಂದ ಗೃಹಸಚಿವ ಡಾ.ಜಿ.ಪರಮೇಶ್ವರ





■ **ಹಂಪಿ ಟೈಮ್ಸ್ ಹೊಸಪೇಟೆ**

ನೂತನ ಜಿಲ್ಲೆಯಾಗಿ ಮೂರು ವರ್ಷ ತುಂಬುವುದರೊಳಗೆ ವಿಜಯನಗರ ಜಿಲ್ಲೆಯಲ್ಲಿ ಜಿಲ್ಲಾ ಪೊಲೀಸ್ ಇಲಾಖೆಯು ಸುಸಜ್ಜಿತವಾಗಿ ಬೃಹತ್ ವಿಶಾಲ ಆವರಣದಲ್ಲಿ ನಿರ್ಮಾಣವಾಗಿರುವುದು ಸಂತಸದ ಸಂಗತಿ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್. ಮತ್ತು ತಂಡದವರ ಕಾರ್ಯವೈಖರಿಯು ಶ್ಲಾಘನೀಯ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದರು.

ನಗರದ ಹಳೇ ಅಮರಾವತಿ ಹಳೇ ಟಿಎಸ್‌ಪಿ ಸ್ಥಳದಲ್ಲಿ ಬುಧವಾರ ವಿಜಯನಗರ ಜಿಲ್ಲೆಯಲ್ಲಿ ಪೊಲೀಸ್ ಅಧೀಕ್ಷಕರ ಕಚೇರಿ, ಡಿಎಆರ್ ಘಟಕದ ಆಡಳಿತ ಕಟ್ಟಡ, ಪೇರೆಡ್ ಮೈದಾನ ಲೋಕಾರ್ಪಣೆಗೊಳಿಸಿ ಮತ್ತು 10 ಕೋಟಿ ರೂ.ವೆಚ್ಚದಲ್ಲಿ 36 ಡಬಲ್ ಬೆಡ್ ರೂಂ ಸಹಿತ ಸುಸಜ್ಜಿತ 36 ಗೃಹ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

2021-22ನೇ ಸಾಲಿನ ವಿಶೇಷ ಅನುದಾನ ಪ್ರಯೋಜನೆ ಅಡಿ ಹೊಸಪೇಟೆ ನಗರದಲ್ಲಿ ಮಂಜೂರಾದ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಕಚೇರಿಯ ನಿರ್ಮಾಣಗೊಂಡಿದೆ. ಹೊಸ ಜಿಲ್ಲೆಯಾಗಿ ರಚನೆಯಾದಾಗ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಒಂದಷ್ಟು ಸಮಯ ಹಿಡಿಯುತ್ತದೆ. ಆದರೆ, ಅಲ್ಪಾವಧಿಯಲ್ಲೇ ವಿಜಯನಗರ ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಗಿರುವುದು ಒಳ್ಳೆಯ ಬೆಳವಣಿಗೆ. ಈ ದಿಶೆಯಲ್ಲಿ ಸ್ಥಳೀಯ ಶಾಸಕರಾದ ಹೆಚ್.ಆರ್.ಗವಿಯಪ್ಪ ಅವರ ಶ್ರಮ, ಬದ್ಧತೆಯು ಶ್ಲಾಘನೀಯವಾದುದು ಎಂದರು.

ಇಡೀ ದೇಶದಲ್ಲಿ ಕರ್ನಾಟಕ ಪೊಲೀಸ್ ಇಲಾಖೆ ಉತ್ತಮ ಬಿರುದು ಪಡೆದುಕೊಂಡಿದೆ. ಕರ್ನಾಟಕ ರಾಜ್ಯದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರು.

ಸ್ಥಳೀಯ ಶಾಸಕರಾದ ಹೆಚ್.ಆರ್.ಗವಿಯಪ್ಪ ಮಾತನಾಡಿ, ಗೃಹ ಸಚಿವರ ನೀಡಿದ ಸಹಕಾರದಿಂದಾಗಿ ವಿಜಯನಗರ ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿ ಕಳೆದೊಂದು ವರ್ಷದಿಂದ ಸಾಕಷ್ಟು ಹೊಸತನ ಕಾಣುತ್ತಿದೆ. ಹೊಸಪೇಟೆ ಜಿಲ್ಲೆಯಾದನಂತರ ಮನೆ ಬಾಡಿಗೆ ದರ ಗಗನಕ್ಕೇರಿರುವದರಿಂದ ನೌಕರರು ಈ ಊರಿಗೆ ವರ್ಗಾವಣೆಯಾಗಿ ಬರಲು ಹಿಂಜರಿಯುತ್ತಿದ್ದಾರೆ. ಪೊಲೀಸ್ ಸಿಬ್ಬಂದಿಯ ಕೊರತೆಯೂ ಇದೆ. ಅಗತ್ಯ ಸಿಬ್ಬಂದಿ ಮತ್ತು ಮನೆಗಳ ನಿರ್ಮಾಣಕ್ಕೆ ಅಗತ್ಯ ನೆರವು ನೀಡಬೇಕು. ವಿಜಯನಗರ ಜಿಲ್ಲೆಯಲ್ಲಿ ಈಗಾಗಲೇ ಜಾಗ ನಿಗದಿಪಡಿಸಿದ್ದು ಮಹಿಳಾ ಪೊಲೀಸ್ ಠಾಣೆ ನಿರ್ಮಾಣವಾಗಬೇಕಿದೆ. ಟ್ರಾಫಿಕ್ ಪೊಲೀಸ್ ಠಾಣೆ ಸಹ ಹೊಸದಾಗಿ ನಿರ್ಮಾಣವಾಗಬೇಕಿದೆ. ಪೊಲೀಸ್ ಇಲಾಖೆಗೆ ವಾಹನಗಳ ಅವಶ್ಯಕತೆ ಇದೆ. ವಿಜಯನಗರ ಜಿಲ್ಲೆಗೆ ನೂತನವಾಗಿ ಐಜಿ, ಡಿಜಿ ಮತ್ತು ಜಿಲ್ಲಾಧಿಕಾರಿಗಳ ಕಚೇರಿ ಆಗಬೇಕಿದೆ ಎಂದರು ಸಚಿವರ ಗಮನ ಸೆಳೆದರು.

ಬಳ್ಳಾರಿ ವಲಯದ ಪೊಲೀಸ್ ಮಹಾ ನಿರೀಕ್ಷಕರಾದ ಬಿ.ಎಸ್.ಲೋಕೇಶ್‌ಕುಮಾರ್ ಪ್ರಾಸ್ತಾವಿಕ ಮಾತನಾಡಿ, 8 ಎಕರೆ ಜಾಗದಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಕಚೇರಿಯ ಕಟ್ಟಡ, ಶ್ವಾನ ದಳ ಕಟ್ಟಡಗಳನ್ನು ಕೆಕೆಆರ್‌ಡಿಬಿಯ 4 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಇದೆ ಜಾಗದಲ್ಲಿ ಧ್ವಜಸ್ತಂಭ ಮತ್ತು ಪೊಲೀಸ್ ಕವಾಯತು ಮೈದಾನವನ್ನ ಸರ್ಕಾರದ ಯಾವುದೇ ಅನುದಾನವಿಲ್ಲದೇ ಸ್ಥಳೀಯ ಸಂಘ ಸಂಸ್ಥೆಗಳ ಸಹಕಾರದಿಂದ ನಿರ್ಮಿಸಿರುವುದು ವಿಶೇಷವಾಗಿದೆ. ಈ ಕಾರ್ಯದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್. ಮತ್ತು ಅವರ ತಂಡದವರ ಶ್ರಮ ಅತ್ಯಂತ ಶ್ಲಾಘನೀಯವಾದುದಾಗಿದೆ ಎಂದು ಹೇಳಲು ಹರ್ಷ ಎನಿಸುತ್ತಿದೆ ಎಂದು ತಿಳಿಸಿದರು.



ಈ ಸಂದರ್ಭದಲ್ಲಿ ಹರಪನಹಳ್ಳಿ ಶಾಸಕರಾದ ಲತಾ ಮಲ್ಲಿಕಾರ್ಜುನ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್.ಎನ್.ಮಹಮ್ಮದ್ ಇಮಾಮ್ ನಿಯಾಜಿ, ಕುರಿ ಶಿವಮೂರ್ತಿ, ಪೊಲೀಸ್ ಇಲಾಖೆಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರಾದ ಆರ್.ಹಿತೇಂದ್ರ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಪಂ ಸಿಇಒ ಎನ್.ಎಂ.ಅಕ್ರಮ ಅಲಿ ಶಾ., ಕೊಪ್ಪಳ ಎಸ್ಪಿ ರಾಮ್ ಎಲ್ ಅರಸಿದ್ದಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಲೀಮ್ ಪಾಶಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು ಬಿ.ಎಲ್. ಸ್ವಾಗತಿಸಿದರು. ಶಿಕ್ಷಕ ಬಸವರಾಜ ನಿರೂಪಿಸಿದರು.

ಪ್ರತಿಭಾ ಪುರಸ್ಕಾರ : 2023-24ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಪೊಲೀಸ್ ಇಲಾಖೆಯಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿಯ ಮಕ್ಕಳಿಗೆ ಇದೆ ವೇಳೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಐಎಎಸ್, ಐಪಿಎಸ್ ಸೇರಿದಂತೆ ಉನ್ನತ ಹುದ್ದೆಗಳಿಗೆ ಏರಲು ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡುವ ಈ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಶ್ಲಾಘನೀಯವಾದುದು ಎಂದು ಇದೆ ವೇಳೆ ಕಾರ್ಯಕ್ರಮದ ಬಗ್ಗೆ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು.

---

## ಮೈಕ್ರೋ ನ್ಯೂಸ್

### ಆ.17ಕ್ಕೆ ಮೊದಲನೇ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯ ಕರ್ನಾಟಕ ಅಭಿವೃದ್ಧಿ ಕಾರ್ಯ ಕ್ರಮಗಳ (20 ಅಂಶ ಸೇರಿದಂತೆ) ಏ.01 ರಿಂದ ಜೂ.30 ರ ವರೆಗಿನ ಮೊದಲನೇ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅಧ್ಯಕ್ಷತೆಯಲ್ಲಿ ಆ.17 ರಂದು ಮಧ್ಯಾಹ್ನ 02.30 ಗಂಟೆಗೆ ಜಿಲ್ಲಾ ಪಂಚಾಯತ್‌ನ ನಜೀರ್‌ಸಾಬ್ ಸಭಾಂಗಣದಲ್ಲಿ ನಿಗದಿಪಡಿ ಸಲಾಗಿದೆ ಎಂದು ಕರ್ನಾಟಕ (20 ಅಂಶ) ಅನುಷ್ಠಾನ ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆದ ಜಿಲ್ಲಾ ಪಂಚಾ ಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ತಿಳಿಸಿದ್ದಾರೆ.

### ಆ.08ಕ್ಕೆ ಡಿ.ದೇವರಾಜು ಅವರ ಜನ್ಮದಿನಾಚರಣೆ ಪೂರ್ವಭಾವಿ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**

ಸಾಮಾಜಿಕ ನ್ಯಾಯದ ಹರಿಕಾರ ಹಾಗೂ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಡಿ.ದೇವರಾಜು ಅವರ 109ನೇ ಜನ್ಮದಿನಾಚರಣೆ ಅರ್ಥಪೂರ್ಣವಾಗಿ ಆಚರಿಸುವ ಸಲುವಾಗಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಗಸ್ಟ್ 08 ರಂದು ಸಂಜೆ 04.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ ಅವರು ತಿಳಿಸಿದ್ದಾರೆ.


### ಆಗಸ್ಟ್ 12ಕ್ಕೆ ಗ್ರಾಹಕರ ಕುಂದು ಕೊರತೆಗಳ ಸಭೆ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜೆಸ್ಕಾಂನಿಂದ ಇ.ಎಚ್.ಟಿ/ಹೆಚ್.ಟಿ ವಿದ್ಯುತ್ ಗ್ರಾಹಕರ ಕುಂದು ಕೊರತೆಗಳ ಸಭೆಯನ್ನು ಆಗಸ್ಟ್ 07 ರಂದು ಬೆಳಗ್ಗೆ 10.30 ಗಂಟೆಗೆ ನಗರದ ಕಾರ್ಯ ಮತ್ತು ಪಾಲನಾ ವಿಭಾಗ ಕಚೇರಿಯಲ್ಲಿ ಆಯೋಜಿಸಲಾಗಿದೆ.

ಇ.ಎಚ್.ಟಿ/ಹೆಚ್.ಟಿ ವಿದ್ಯುತ್ ಗ್ರಾಹಕರ ಕುಂದು ಕೊರತೆಗಳ ಸಭೆಯ ಅಧ್ಯಕ್ಷತೆಯನ್ನು ಜೆಸ್ಕಾಂ ಕಾರ್ಯ, ಪಾಲನಾ ಬಳ್ಳಾರಿ ವಲಯ ಕಛೇರಿಯ ಮುಖ್ಯ ಅಭಿಯಂತರರು(ವಿ) ವಹಿಸುವರು. ಕೊಪ್ಪಳ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಇಹೆಚ್.ಟಿ/ಹೆಚ್.ಟಿ ವಿದ್ಯುತ್ ಗ್ರಾಹಕರು ಈ ಸಭೆಗೆ ಹಾಜರಾಗಬೇಕು ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನಾ ವೃತ್ತದ ಅಧೀಕ್ಷಕ ಅಭಿಯಂತರರು ತಿಳಿಸಿದ್ದಾರೆ.

### ಉಪ್ಪಾರ ಕಾಶಮ್ಮ ನಿಧನ



**ಹಗರಿಬೊಮ್ಮಹಳ್ಳಿ:** ತಾಲೂಕಿನ ಅಂಕ ಸಮುದ್ರದ ನಿವಾಸಿ ಉಪ್ಪಾರ ಕಾಶೆಮ್ಮ(70) ಮಂಗಳವಾರ ತಡರಾತ್ರಿ ಲಘು ಹೃದಯಘಾತದಿಂದ ನಿಧನರಾಗಿದ್ದಾರೆ.

ಇವರಿಗೆ ಪತ್ರಕರ್ತ ಉಪ್ಪಾರ ವೆಂಕಟೇಶ್ ಸೇರಿ ದಂತೆ ಮೂವರು ಪುತ್ರರು ಹಾಗೂ ಒಬ್ಬ ಪುತ್ರಿ ಮತ್ತು ಅಪಾರ ಬಂಧುಬಳಗವನ್ನು ಅಗಲಿ ದ್ದಾರೆ. ಇವರ ಅಂತ್ಯ ಸಂಸ್ಕಾರ ಬುಧವಾರ ಮಧ್ಯಾಹ್ನ ಗ್ರಾಮದ ರುದ್ರ ಭೂಮಿಯಲ್ಲಿ ಜರುಗಿತು.

---

# ಸುಂದರ ಪಟ್ಟಣದ ಪರಿಕಲ್ಪನೆಗೆ ಸಹಕರಿಸಿ

## ಕೂಡ್ಲಿಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಮನವಿ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಸುಂದರ ಪಟ್ಟಣದ ಪರಿಕಲ್ಪನೆಗೆ ಈಗಾಗಲೇ ಎಲ್ಲಾ ಪೂರ್ವ ನಿಯೋಜಿತ ಯೋಜನೆ ಕೈಗೊಂಡಿದ್ದು ಪಪಂ ವ್ಯಾಪ್ತಿಯ ಎಲ್ಲಾ ಸದಸ್ಯರ ಸಹಕಾರ ಅತ್ಯಗತ್ಯ ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಮನವಿ ಮಾಡಿದರು.

ಪಟ್ಟಣದ ಪಪಂ ಸಭಾಂಗಣದಲ್ಲಿ ಮಂಗಳವಾರ ಪಪಂ ಆಡಳಿತಾಧಿಕಾರಿ ಸಹಾಯಕ ಆಯುಕ್ತ ಪಿ.ವಿವೇಕಾನಂದ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದರು. ಸುಮಾರು 35 ಕೋಟಿಗೂ ಹೆಚ್ಚಿನ ಅನುದಾನದಲ್ಲಿ ಈಗಾಗಲೇ ಪಟ್ಟಣದಲ್ಲಿ ಒಳಚರಂಡಿ ಯೋಜನೆ ಪೂರ್ಣವಾಗಿದೆ. ಅಲ್ಲಲ್ಲಿ ಕೆಲವು ಲೋಪಗಳಿದ್ದು ಅದನ್ನು ಇನ್ನೂ ಹೆಚ್ಚಿನ ಅನುದಾನ ಬಿಡುಗಡೆ ಮಾಡಿಸಿ ಬಗೆಹರಿಸಲಾಗುವುದು, ಸುಂದರ ಹಾಗು ಸ್ವಚ್ಛ ಪಟ್ಟಣದ ಗುರಿ ಹೊಂದಿದ್ದು, ಅದಕ್ಕೆ ಎಲ್ಲರ ಸಹಕಾರ ಅಗತ್ಯ, ಅನವಶ್ಯಕವಾಗಿ ಸಮಸ್ಯೆಗಳನ್ನು ಉಂಟು ಮಾಡದಿರಿ, 15 ದಿನಗಳಲ್ಲಿ ಈ ಕುರಿತು ಸದಸ್ಯರ ಅಭಿಪ್ರಾಯ ಪಡೆದು ಪಪಂ ಮುಖ್ಯಾಧಿಕಾರಿ ಹಾಗೂ ಸಹಾಯಕ ಆಯುಕ್ತರ ಜತೆ ಚರ್ಚೆ ಮಾಡಿ ತೊಂದರೆ ನಿವಾರಣೆ ಮಾಡಲಾಗುವುದು ಎಂದು ಭರವಸೆ ನೀಡಿದರು.

14 ನೇ ವಾರ್ಡಿನ ಸದಸ್ಯೆ ರೇಣುಕಾ ದುರುಗೇಶ್ ಮಾತನಾಡಿ, ಅಂಬೇಡ್ಕರ್ ನಗರದಲ್ಲಿ ಒಳ ಚರಂಡಿ ಚೇಂಬರ್ ತುಂಬಿ ಕಲುಷಿತ ನೀರು ಹರಿದು ದುರ್ನಾತ ಬೀರುವ ಜತೆ ಸೊಳ್ಳೆಗಳು ಜಾಸ್ತಿ ಯಾಗಿದೆ. ಕಾಲನಿ ಜನಕ್ಕೆ ನಾವು ಏನು ಉತ್ತರಿಸಬೇಕು ಎನ್ನುವ ಪ್ರಶ್ನೆಗೆ ಉತ್ತರಿಸಿದ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಒಳ ಚರಂಡಿ ನೀರನ್ನು ಸುಗುಮಗೊಳಿಸುವ ಯಂತ್ರ ದುರಸ್ತಿಯಲ್ಲಿದ್ದು ನಾಳೆಯೇ ಅದನ್ನು ಸುಗುಮಗೊಳಿಸಲಾಗುವುದು ಎಂದು ತಿಳಿಸಿದರು. ಒಳ ಚರಂಡಿ ಯೋಜನೆ ಅವೈಜ್ಞಾನಿಕ ಕಾಮಗಾರಿ ಮಾಡಿ ಪಟ್ಟಣ ವ್ಯಾಪ್ತಿಯಲ್ಲಿ ಬಿಟ್ಟು ಪಟ್ಟಣದ ಹೊರಗಡೆಯ ಲೇಔಟ್ ಗಳಲ್ಲಿ ಕಾಮಗಾರಿ ಮಾಡಿ ಕಳಪೆ ಕಾರ್ಯ ಮಾಡಿದ್ದಾರೆ ಎಂದು ಸದಸ್ಯರಾದ ಕೆ.ಈಶಪ್ಪ, ಕೆ.ಎಚ್.ಎಂ.ಸಚಿನ್ ಕುಮಾರ್, ಬಾಸೂ ನಾಯ್ಕ್ ದೂರಿದರು.ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಇಲಾಕೆ ಎಇಇ ಮಲ್ಲಿಕಾರ್ಜುನ ಮಾತನಾಡಿ, ಕಾಮಗಾರಿ ಸಮಗ್ರ ಯೋಜನೆಯಂತೆ ಕೆಲಸ ಮಾಡಿದ್ದು, ಅಲ್ಲಲ್ಲಿ ಸ್ವಲ್ಪ ಹಿನ್ನಡೆ ಆಗಿರಬಹುದು ಮುಂದೆ ಅವುಗಳನ್ನು ಬಗೆಹರಿಸಿ ಒಳ ಚರಂಡಿ ವ್ಯವಸ್ಥೆ ಸರಿಪಡಿಸಲಾಗುವುದು ಎಂದು ತಿಳಿಸಿದರು.

ಅಂಬೇಡ್ಕರ್ ನಗರದ ಸಾಮೂಹಿಕ ಶೌಚಾಲಯ ತೆರವುಗೊಳಿಸಲಾಗುವುದು, ಪಟ್ಟಣದ ಮಹಾದೇವ ಮೈಲಾರ ಕ್ರೀಡಾಂಗಣದಲ್ಲಿ ಹೈಮಾಸ್ ಲೈಟ್ ತೆರವುಗೊಳಿಸದೇ ಹಳೆಯ ಜಾಗದಲ್ಲಿಯೇ ಆಗಷ್ಟ್ 15 ರಂದು ಧ್ವಜಾರೋಹಣ ಮಾಡಲಾಗುವುದು. ಅದರಂತೆ 19 ನೇ ವಾರ್ಡ್ ನಲ್ಲಿ ಮೇಲ್ಮಟ್ಟದ ಜಲ ಸಂಗ್ರಹಗಾರ ಬೀಳುವ ಹಂತದಲ್ಲಿದ್ದು ಅದನ್ನು ತೆರವುಗೊಳಿಸಲಾಗುವುದು ಸೇರಿದಂತೆ ಪಪಂ ವ್ಯಾಪ್ತಿಯ ಏನೆ ಸಮಸ್ಯೆಗಳಿದ್ದರು ನನ್ನ ಗಮನಕ್ಕೆ ತಂದರೆ ಸರಿಪಡಿಸಲು ಮುಂದಾಗುವೆ ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ತಿಳಿಸಿದರು. ಅದರಂತೆ ಪಪಂ ಕಚೇರಿಯ ಎಲ್ಲಾ ಸಿಬ್ಬಂದಿಗಳು ಸಹ ವೃಥಾ ಜನರನ್ನು ಅಲೆದಾಡಿಸದೇ ತ್ವರಿತವಾಗಿ ಸಾರ್ವಜನಿಕರ ಕೆಲಸ ಮಾಡಿಕೊಡಲು ಮುಖ್ಯಾಧಿಕಾರಿ ಎಂ.ಕೆ.ಮುಗಳಿ ಅವರಿಗೆ ತಿಳಿಸಿದರು.

ಸಹಾಯಕ ಆಯುಕ್ತ ಪಿ.ವಿವೇಕಾನಂದ, ಪಪಂ ಸದಸ್ಯರಾದ ಕಾವಲಿ ಶಿವಪ್ಪನಾಯಕ, ತಳಸಾ ವೆಂಕಟೇಶ್, ಸಯ್ಯದ್ ಶುಕೂರ್, ಲಕ್ಷ್ಮೀದೇವಿ, ಎಂ.ಶಾರದಾ ಬಾಯಿ, ಛಾಣಿ ಚೌಡಮ್ಮ, ಬಾಸೂ ನಾಯ್ಕ್, ಪೂರ್ಯಾ ನಾಯ್ಕ್, ಸರಸ್ವತಿ ರಾಘವೇಂದ್ರ, ಸರಸ್ವತಿ ರಮೇಶ್ ಮುಖಂಡರಾದ ಪ್ರಭಾಕರ, ಎಸ್.ದುರುಗೇಶ್, ಬಂಡೆ ರಾಘವೇಂದ್ರ, ಛಾಣಿ ರಾಘವೇಂದ್ರ, ಜಿ. ಬಿ.ಭೀಮೇಶ್, ಬಸವರಾಜ, ಬಿ.ಕೆ. ರಾಘವೇಂದ್ರ ಇದ್ದರು.




ಹಂಪಿ ಟೈಮ್ಸ್ HAMPI TIMES

## ವಿಜ್ಞಾನ

### ಬೆರಳುಗಳು ಏಕೆ ಸುಕ್ಕುಗಟ್ಟುತ್ತವೆ?

■ ಆರ್.ಬಿ.ಗುರುಬಸವರಾಜ

ಬಹಳ ಸಮಯದವರೆಗೂ ನೀರಿನಲ್ಲಿ ಕೆಲಸ ಮಾಡಿದ ಪ್ರಿಯಾಂಕ ಕೈಒರೆಸಿಕೊಂಡು ಬೆರಳುಗಳನ್ನು ನೋಡಿಕೊಂಡಳು. ಬೆರಳುಗಳೆಲ್ಲ ಸುಕ್ಕುಗಟ್ಟಿದ್ದವು. ಅಜ್ಜಿಯ ಬಳಿ ಬಂದು ತನ್ನ ಬೆರಳುಗಳನ್ನು ತೋರಿಸಿದಳು. ಅವಳ ಸಹೋದರಿ ಅನಿತ ಅಲ್ಲಿಗೆ ಬಂದಳು. ಪ್ರಿಯಾಂಕಳ ಬೆರಳು ಸುಕ್ಕುಗಟ್ಟಿರುವುದನ್ನು ನೋಡಿ ಅಚ್ಚರಿಗೊಂಡಳು. 'ಅಜ್ಜಿ ಬೆರಳುಗಳು ಏಕೆ ಹೀಗೆ ಸುಕ್ಕುಗಟ್ಟುತ್ತವೆ?" ಎಂದು ಪ್ರಶ್ನಿಸಿದಳು. ಅದಕ್ಕೆ ಅಜ್ಜಿಯ ವಿವರಣೆ ಹೀಗಿತ್ತು.

ನೀರನ್ನು ಹೀರಿಕೊಂಡ ನಂತರ ಬೆರಳುಗಳು ಸುಕ್ಕುಗಟ್ಟುವುದು ಸಾಮಾನ್ಯ ವಿದ್ಯಮಾನವಾಗಿದೆ. 'ನೀರು ಪ್ರೇರಿತ ಸುಕ್ಕು' ಎಂದು ಕರೆಯಲ್ಪಡುವ ಇದು ದೇಹದ ನೈಸರ್ಗಿಕ ಶಾರೀರಿಕ ಪ್ರತಿಕ್ರಿಯೆಯಿಂದ ಉಂಟಾಗುತ್ತದೆ. ಬೆರಳುಗಳನ್ನು ದೀರ್ಘಕಾಲದವರೆಗೆ ನೀರಿಗೆ ಒಡ್ಡಿಕೊಂಡಾಗ, ಚರ್ಮದ ಹೊರ ಪದರವು ನೀರನ್ನು ಹೀರಿಕೊಳ್ಳಲು ಪ್ರಾರಂಭಿಸುತ್ತದೆ. ಇದು ಚರ್ಮವನ್ನು ಹಿಗ್ಗಿಸಲು ಕಾರಣವಾಗುತ್ತದೆ. ಚರ್ಮದ ಹೊರಗಿನ ಪದರವು (ಎಪಿಡರ್ಮಿಸ್) ಆಸ್ಮೋಸಿಸ್ ಮೂಲಕ ನೀರನ್ನು ಹೀರಿಕೊಳ್ಳಲು ಪ್ರಾರಂಭಿಸುತ್ತದೆ.



ಆಸ್ಮೋಸಿಸ್ ಎನ್ನುವುದು ಹೆಚ್ಚಿನ ಸಾಂದ್ರತೆಯ ಪ್ರದೇಶದಿಂದ ಕಡಿಮೆ ಸಾಂದ್ರತೆಯ ಪ್ರದೇಶಕ್ಕೆ ಅರೆ ಪ್ರವೇಶಸಾಧ್ಯ ಪೊರೆಯ ಮೂಲಕ ನೀರಿನ ಚಲನೆಯಾಗಿದೆ. ನಮ್ಮ ಬೆರಳುಗಳ ಮೇಲಿನ ಚರ್ಮವು 'ಕೆರಾಟಿನ್' ಹೆಚ್ಚಿನ ಸಾಂದ್ರತೆಯನ್ನು ಹೊಂದಿರುತ್ತದೆ. ಇದು ಚರ್ಮವನ್ನು ಜಲನಿರೋಧಕವಾಗಿಸುವ ಪ್ರೋಟೀನ್ ಆಗಿದೆ. ನಮ್ಮ ಬೆರಳುಗಳನ್ನು ನೀರಿನಲ್ಲಿ ನೆನೆಸಿದಾಗ, ಚರ್ಮದ ಮೇಲ್ಮೈಯಲ್ಲಿರುವ ನೀರು ಕೆರಾಟಿನ್ ಪದರವನ್ನು ತೂರಿಕೊಂಡು ಚರ್ಮಕ್ಕೆ ಹೀರಿಕೊಳ್ಳುತ್ತದೆ. ನೀರು ಚರ್ಮಕ್ಕೆ ಪ್ರವೇಶಿಸಿದಾಗ ಅದು ರಕ್ತನಾಳಗಳು ಮತ್ತು ಬೆರಳುಗಳ ಇತರ ಅಂಗಾಂಶಗಳನ್ನು ವಿಸ್ತರಿಸಲು ಕಾರಣವಾಗುತ್ತದೆ. ಆದರೆ ಕೆರಾಟಿನ್ ಪದರವು ಇನ್ನೂ ಅಗ್ರಾಹ್ಯವಾಗಿರುವುದರಿಂದ, ಚರ್ಮವನ್ನು ಪ್ರವೇಶಿಸಿದ ನೀರು ಸುಲಭವಾಗಿ ಹೊರಬರಲು ಸಾಧ್ಯವಿಲ್ಲ. ಇದು ಚರ್ಮವನ್ನು ವಿಸ್ತರಿಸಲು ಕಾರಣವಾಗುತ್ತದೆ ಮತ್ತು ನಮ್ಮ ಬೆರಳುಗಳ ಮೇಲಿನ ಚರ್ಮವು ಆಧಾರವಾಗಿರುವ ಅಂಗಾಂಶಗಳಿಗೆ ಬಿಗಿಯಾಗಿ ಜೋಡಿಸಲ್ಪಟ್ಟಿರುವುದರಿಂದ ಅದು ಸುಕ್ಕುಗಳನ್ನು ರೂಪಿಸುತ್ತದೆ.

ನಮ್ಮ ಬೆರಳುಗಳ ಒಳಭಾಗ/ಅಂಗೈನ ಮೇಲ್ಮೈಯ ಚರ್ಮವು ಸತ್ತ ಕೋಶಗಳ ದಪ್ಪ ಪದರವನ್ನು ಹೊಂದಿರುತ್ತವೆ. ಇದು ಜೀವಂತ ಕೋಶಗಳಂತೆಯೇ ನೀರನ್ನು ಹೀರಿಕೊಳ್ಳುವುದಿಲ್ಲ. ಪರಿಣಾಮವಾಗಿ ಎಪಿಡರ್ಮಿಸ್ ಪದರಗಳು ಮತ್ತು ರೇಖೆಗಳನ್ನು ರೂಪಿಸಲು ಪ್ರಾರಂಭಿಸುತ್ತದೆ. ಇದು ನಮ್ಮ ಬೆರಳುಗಳಿಗೆ ಸುಕ್ಕುಗಟ್ಟಿದ ನೋಟವನ್ನು ನೀಡುತ್ತದೆ.

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

### ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಪ್ರವಾಹಪತಿತ ಮನೆಗಳ ನಡುವೆ



ನಾನು ನನ್ನ ಕೆಲವು ಗೆಳೆಯರೂ ಕೂಡಿ ಉತ್ತರ ಕರ್ನಾಟಕದ ನೆರೆ ಪ್ರದೇಶಗಳಲ್ಲಿ ತಿರುಗಾಡಿದೆವು. ತುರ್ತಾಗಿ ಒಂದು ಸಾಮಾಜಿಕ ನೆಲೆಯ ವರದಿಯನ್ನು ಕೊಡುವುದರಿಂದ ಪರಿಸ್ಥಿತಿ ನಿಭಾಯಿಸಲು ಸಂಬಂಧಪಟ್ಟವರಿಗೆ ಅನುವಾಗಬಹುದು ಎಂಬ ಆಶಯದಿಂದ, ಪ್ರವಾಹ ಪ್ರದೇಶದಲ್ಲಿ ಈ ತಿರುಗಾಟ ಮಾಡಿದೆವು. ಬಳ್ಳಾರಿ ಕೊಪ್ಪಳ ಬಾಗಲಕೋಟೆ ಗದಗ ಧಾರವಾಡ ಜಿಲ್ಲೆಗಳಿಗೆ ಸೇರಿದ 20 ಊರುಗಳು; 10 ದಿನಗಳ ಪಯಣ. ಈ ಊರುಗಳನ್ನು ಹಬ್ಬ ಜಾತ್ರೆ ಉರುಸುಗಳ ಸಂಭ್ರಮದಲ್ಲಿ ಮುಳುಗಿರುವಾಗ ನಾನು ಕಂಡಿರುವೆ. ಆದರೆ ಈ ಪ್ರವಾಸ ಕುರುಕ್ಷೇತ್ರದಲ್ಲಿ ಗಾಂಧಾರಿಯ ಅಲೆದಾಟದಂತಿತ್ತು– ಕಾಲಿಗೆ ನೆತ್ತರಗೆಸರು; ಕಿವಿಗೆ ಆರ್ತರ ಗೋಳು; ಕಣ್ಣಿಗೆ ಗಾಯಾಳುಗಳ ಸಾಲು; ಮೂಗಿಗೆ ಕೆಸರಿನ ಹಸಿಹಸೀ ವಾಸನೆ. ನೆರೆಯ ಹೊಡೆತಕ್ಕೆ ಸಿಕ್ಕವರಲ್ಲಿ ಸಹಜವಾಗಿಯೇ ಅಸಹಾಯಕತೆ ನೋವು ಕೋಪ ಉಕ್ಕಿ ಪ್ರವಹಿಸುತ್ತಿದ್ದ ಟೈಮದು. ವ್ಯಕ್ತಿಯಾಗಲಿ ಸಮಾಜವಾಗಲಿ ಸರ್ಕಾರವಾಗಲಿ, ದೈನಿಕ ಬದುಕಿನ ಶಾಂತಸ್ಥಿತಿಯಲ್ಲಿ ತಮ್ಮ ನಿಜರೂಪ ತೋರುವುದಿಲ್ಲ; ಬಿಕ್ಕಟ್ಟಿನಲ್ಲಿದ್ದಾಗಲೇ ತೋರುವುದು. ಮಳೆ ಹಳ್ಳ ಹೊಳೆಗಳು ತಮ್ಮ ವಿಶ್ವರೂಪ ದರ್ಶನವನ್ನು ಮಾತ್ರ ಜಗತ್ತಿಗೆ ತೋರಿಸಿ ಹೋಗಿರಲಿಲ್ಲ; ಹೋಗುತ್ತ ನಮ್ಮ ವ್ಯವಸ್ಥೆಯ ದುರ್ಬಲತೆಗಳನ್ನೂ ಬಟಾ ಬಯಲು ಮಾಡಿ ಹೋಗಿದ್ದವು.

ಜನ ಚೆಲ್ಲಾಪಿಲ್ಲಿಯಾದ ತಮ್ಮ ಬದುಕನ್ನು ಸಂಭಾಳಿಸಲು ಸೆಣಸಾಡುತ್ತಿದ್ದರು. ಈ ಸೆಣಸಾಟದ ಕೇಂದ್ರಬಿಂದು ಮನೆಯೇ ಆಗಿತ್ತು. ತಲೆಯ ಮೇಲಿನ ಸೂರು ಇದ್ದಕ್ಕಿದ್ದಂತೆ ಕಳಚಿಹೋಗಿ, ಬೀದಿಗೆ ಬಿದ್ದರೆ ಆಗುವ ಮಾನಸಿಕ ಆಘಾತ ವಿಚಿತ್ರವಾಗಿರುತ್ತದೆ– ಅದರಲ್ಲೂ ಮಹಿಳೆಯರಲ್ಲಿ. ಕೆಲವು ಕಡೆ ಮನೆಗಳಲ್ಲ, ಊರಿಗೆ ಊರೇ ಬರಬಾದಾಗಿದ್ದವು. ಅವುಗಳಲ್ಲಿ ಮುಖ್ಯವಾದವು ಸಿರಗುಪ್ಪ ತಾಲೂಕಿನ ಹಚೊಳ್ಳಿ, ಹುನಗುಂದ ತಾಲೂಕಿನ ಬಿಸನಾಳಕೊಪ್ಪ ಮತ್ತು ಖೈರವಾಡಿಗಿ; ಹಚೊಳ್ಳಿಯಂತೂ ಬಾಂಬುಬಿದ್ದ ಹಿರೋಶಿಮಾ ತರಹ ಇತ್ತು. ಎರಡು ಮೈಲಿ ದೂರ ಹರಿವ ತುಂಗಭದ್ರೆ, ಊರೊಳಗೆ ನುಗ್ಗಿ ಎಂಟಡಿ ಎತ್ತರಕ್ಕೇರಿ ತನ್ನ ಪ್ರತಾಪ ತೋರಿತ್ತು! ಮಾಟೂರು ಬಳಿ ಹೊಲದಲ್ಲಿದ್ದ ಬೇವಿನಮರವೊಂದರ ತುದಿಗೆ, ನೆಲ್ಲುಹುಲ್ಲಿನ ಅವಶೇಷ ಅಂಟಿಕೊಂಡು, ಪ್ರವಾಹದ ಏರನ್ನು ಸೂಚಿಸಲು ಕಟ್ಟಿದ ಪತಾಕೆಯಂತಿತ್ತು. ಕೂಡಲ ಸಂಗಮದ ಬದಿಗಿರುವ ಬಿಸನಾಳ ಕೊಪ್ಪವಂತೂ ಸಾಕ್ಷಾತ್ ಮಸಣವಾಗಿತ್ತು. ಹೊಸಿಲೊಳಗೆ ಹುಲ್ಲುಹುಟ್ಟಿ ಮನೆಯೊಳಗೆ ರಜತುಂಬಿ ಮನೆಯೊಳಗೆ ಮನೆಯೊಡೆಯ ನಿದ್ದಾನೊ ಇಲ್ಲವೊ ಎಂದು ಶಂಕಿಸುವ ಬಸವಣ್ಣನವರ ಒಂದು ವಚನವಿದೆ. ಈ ಶಂಕೆ, ರಸ್ತೆಬದಿ ಬಾಯಿ ತೆರೆದುಕೊಂಡೇ ಬಿದ್ದಿರುವ ಅನಾಥಶವದಂತಿದ್ದ ಈ ಊರಿಗೆ ಚೆನ್ನಾಗಿ ಅನ್ವಯ ವಾಗುತ್ತಿತ್ತು.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful
HAMPI TIMES E-paper

ಹಚೊಳ್ಳಿಯಲ್ಲಿ ಒಬ್ಬ ಸ್ಥಿತಿವಂತರ ಮಹಿಳೆ ಮಣ್ಣಿನ ದಿಬ್ಬವೊಂದರ ಮೇಲೆ ಕೂತಿದ್ದಳು. ಆ ದಿಬ್ಬ ವಾಸ್ತವವಾಗಿ ಅವಳ ಮನೆ ಕುಸಿದು ಉಂಟಾದ ಮಣ್ಣಿನ ರಾಶಿಯಾಗಿತ್ತು. ಅದರಡಿ ಅಡುಗೆ ಪಾತ್ರೆ, ದೇವರ ಫೋಟೊ, ಮದುವೆಯ ರೇಶ್ಮೆಸೀರೆ, ಅಕ್ಕಿಯ ಮೂಟೆ, ಮಗನ ಮಾರ್ಕ್ಸ್‌ಕಾರ್ಡು, ಮಗಳಿಗೆ ಮಾಡಿಸಿದ ಆಭರಣ ಎಲ್ಲವೂ ಅಡಗಿದ್ದವು. ಶೂನ್ಯದಲ್ಲಿ ನೋಟ ನಟ್ಟಿದ್ದ ಆಕೆ, ಮಾತಾಡಿದರೆ ಉತ್ತರಿಸಲಿಲ್ಲ–ಮಾತಾಡಿ ಏನುಪಯೋಗ ಎಂಬಂತೆ. ಮನೆಬಿದ್ದರೆ ಅಥವಾ ಸುಟ್ಟರೆ ನಷ್ಟದ ಅಂದಾಜನ್ನು ಹಣದ ರೂಪದಲ್ಲಿ ಮಾಡಬಹುದು. ಆದರೆ ಆಘಾತಕ್ಕೆ ಒಳ ಗಾದವರ ಭಾವನೆಗಳನ್ನು ಲೆಕ್ಕಹಾಕುವುದು ಹೇಗೆ? ಘಟನೆಯ ವಿವರಗಳು ಅಂಕಿ ಸಂಖ್ಯೆಯಾಗಿ ಪರಿವರ್ತನೆ ಯಾದಾಗ, ಭಾವನೆಗಳಿಗೆ ಜಾಗವೂ ಉಳಿದಿರುವುದಿಲ್ಲ.

ಹಚೊಳ್ಳಿಯಲ್ಲಿ ಈಗ ತಮಾಶೆಯಾಗಿ ಕಾಣುವ ಒಂದು ಸನ್ನಿವೇಶವೂ ಕಣ್ಣಿಗೆ ಬಿತ್ತು. ಅಕ್ಕಪಕ್ಕದ ಮನೆಯ ಗಂಡಸರು ಬೀಡಿ ಸೇದಿಕೊಂಡು ತಮಗೆ ಅಷ್ಟೇನು ಸಂಬಂಧವಿಲ್ಲ ಎಂಬಂತೆ ನಿಂತಿರುವಾಗ, ಅಕ್ಕಪಕ್ಕದ ಮನೆಯ ಇಬ್ಬರು ಹೆಂಗಸರು ಜಗಳಕ್ಕೆ ಬಿದ್ದಿದ್ದರು. ಅವರಲ್ಲಿ ಇಬ್ಬರು ಪರಸ್ಪರ ಕೂದಲು ಹಿಡಿದು ಟಗರು ಕಾಳಗಕ್ಕೆ ಬಿದ್ದಿದ್ದು, ಹಸಿ ಎರೆಮಣ್ಣು ಮೆತ್ತಿಕೊಂಡು ಜಟ್ಟಿಗರಂತೆ ತೋರುತ್ತಿದ್ದರು. ವಿಚಾರಿಸಿದರೆ, ರಾಶಿಬಿದ್ದಿರುವ ಹಾಳ್ಮಣ್ಣನ್ನು ಬಾಚಿ ಗುಡ್ಡೆ ಹಾಕಿಕೊಳ್ಳುವ ವಿಷಯದಲ್ಲಿ ವಿವಾದ ಉಂಟಾಗಿತ್ತು. ಅಕ್ಕಪಕ್ಕದ ಮನೆಗಳು ಕುಸಿದಾಗ ಎರಡರ ಮಣ್ಣು ಒಂದರೊಳಗೊಂದು ಸೇರಿಕೊಂಡು, ಯಾರಮಣ್ಣು ಯಾವುದು ಎಂಬುದು ತಿಳಿಯದೆ ಕಲಹಕ್ಕೆ ಕಾರಣವಾಗಿತ್ತು. ಮಣ್ಣಿನ ಮನೆಗಳಿಗೆ ಕೊಂಬೆ ಮತ್ತು ಸೊಪ್ಪುಸದೆ ಹಾಸಿ, ಅದರ ಮೇಲೆ ಹಾಳ್ಮಣ್ಣು ಹಾಕಿ ಟೆರೇಸಿನಂತೆ ಮಾಳಿಗೆ ಮಾಡಲಾಗುತ್ತದೆ. ಒಂದು ಟ್ರ್ಯಾಕ್ಟರ್ ಹಾಳ್ಮಣ್ಣಿಗೆ ಒಂದು ಸಾವಿರವಂತೆ. ಸರ್ಕಾರ ಇಡೀ ಊರನ್ನೇ ಸ್ಥಳಾಂತರ ಮಾಡಲು ಯೋಚಿಸುತ್ತಿದ್ದರೆ, ಇಲ್ಲೊ ಮಹಿಳೆಯರು ಮಣ್ಣಿಗಾಗಿ ಹೋರಾಟ ಮಾಡುತ್ತಿದ್ದರು.

ಸಂಪೂರ್ಣ ಕುಸಿದ ಮನೆಗಳು ತಮ್ಮ ಮಾಲಕರಿಗೆ ಹೊಸಮನೆ ಕಟ್ಟಿಕೊಳ್ಳಲು, ಇಲ್ಲವೇ ಕೊಡಲಾಗುವ ಹೊಸ ಮನೆಗೆ ಹೋಗಲು ಅವಕಾಶ ಕಲ್ಪಿಸಿದ್ದವು. ನಿಜವಾದ ಸಮಸ್ಯೆ ಅರೆಬರೆ ಬಿದ್ದ ಮನೆಯವರದ್ದಾಗಿತ್ತು. ಅವು ರಸ್ತೆ ಅಪಘಾತಕ್ಕೆ ಸಿಕ್ಕು ಇತ್ತ ಬದುಕಲೂ ಅತ್ತ ಸಾಯಲೂ ಆಗದ ಸ್ಥಿತಿಯಲ್ಲಿ ಹಾಸ್ಪಿಟಲೈಜ್ ಆಗಿರುವ ಗಾಯಾಳುಗಳಂತಿದ್ದವು. ಮಲಪ್ರಭಾ ದಂಡೆಯ ಬೇನಾಳದಲ್ಲಿ ಬಹುತೇಕ ಮನೆಗಳು 'ಡಬ್ಬು' ಬಿದ್ದಿದ್ದವು. ಹೊಳೆಯಿಂದ ಕೊಂಚ ಮೇಲಿದ್ದ ಒಂದು ಮನೆ ಕುಸಿದಿರಲಿಲ್ಲ. ಇದಕ್ಕೆ ಸಿಮೆಂಟ್ ಇಟ್ಟಿಗೆ ಬಳಸಿ ಕಟ್ಟಿದ್ದೂ ಒಂದು ಕಾರಣವಿರಬೇಕು. ಆದರೆ ಎರಡು ದಿನ ನೀರುನಿಂತು ಗೋಡೆ ಬಿರುಕುಬಿಟ್ಟಿದ್ದವು. ನೆಲಕ್ಕೆ ಹಾಸಿದ್ದ ಚಪ್ಪಡಿಗಳೆಲ್ಲ ಮೇಲುಕೆಳಗಾಗಿದ್ದವು. ಅಡಿಗೆ ಮನೆಯಲ್ಲಿ ಸಮಾಧಿ ತೋಡಿದಂತೆ ನೆಲ ಕುಸಿಬಿದ್ದಿತ್ತು. ಮನೆತುಂಬ ಹರಡಿದ್ದ ಕೆಸರಿನಿಂದ ದುರ್ವಾಸನೆ ಹೊರಡುತ್ತಿತ್ತು. ವಾಸಮಾಡುವಂತಿಲ್ಲ. ಮನೆಬಿಟ್ಟು ಬಿಟ್ಟು ಹೋಗುವಂತೆಯೂ ಇಲ್ಲ. ಮನೆ ಪೂರ್ಣ ಕುಸಿದಿಲ್ಲವಾಗಿ ಪರಿಹಾರವೂ ಕಡಿಮೆ. ಮನೆಯೊಡತಿ ಗೊಳೋ ಎಂದು ರೋದಿಸುತ್ತ, ನಮ್ಮನ್ನು ಎಳೆದುಕೊಂಡು ಹೋಗಿ ಗೋಡೆ ವಾಲಿಕೊಂಡು ಆಗಿರುವ ಸೀಳುಗಳನ್ನೂ ತೋರಿಸಿದಳು. ಮನೆಗಿಳಿದು ಮಾಸವೂ ಕಳೆದಿರಲಿಲ್ಲ. ಬಹುಶಃ ಸಾಕಿದ ಕುರಿಯನ್ನೊ ಮನೆಯ ದವಸವನ್ನೊ ಮೂಗಿನ ನತ್ತನ್ನೊ ಮಾರಿ, ಒಂದೊಂದೇ ಕಡ್ಡಿಯನ್ನು ತಂದು ಹಕ್ಕಿಗೂಡು ಕಟ್ಟುವಂತೆ, ಆಕೆ ಈ ಮನೆ ಕಟ್ಟಿರಬೇಕು. ಈಗ ಸರ್ವಸ್ವವೇ ಕಳೆದುಹೋದಂತೆ ಮಾಡುತ್ತಿದ್ದಳು.

ನೆರೆಯ ಹೊಡೆತಕ್ಕೆ ಮಣ್ಣಿನ ಮನೆಗಳು ಬಿದ್ದಿದ್ದವು. ಅವುಗಳ ನಡುವೆ ಸೀಮೆಂಟು ಇಟ್ಟಿಗೆ ಕಾಂಕ್ರೀಟು ಬಳಸಿ ಕಟ್ಟಿದ ಮನೆಗಳು ಮಾತ್ರ, ಯುದ್ಧದಲ್ಲಿ ಬದುಕುಳಿದು ಬಂದವರಂತೆ ನಿಂತಿದ್ದವು. ಕಳಪೆ ಕಾಮಗಾರಿಯಲ್ಲಿ ಕಟ್ಟಿದ್ದ ಜನತಾ ಮನೆಗಳು ಬೀಳದೆ ನಿಂತುಕೊಂಡು ಬೆರಗು ಹುಟ್ಟಿಸುತ್ತಿದ್ದವು. ಇದು ಆಧುನಿಕ ಮತ್ತು ಸಾಂಪ್ರದಾಯಿಕ ಮನೆಗಳ ನಡುವೆ ಜರುಗಿದ ಸ್ಪರ್ಧೆಯಲ್ಲಿ ಮಳೆ ಕೊಟ್ಟ ವಿಶಿಷ್ಟ ತೀರ್ಪಿನಂತೆ ತೋರುತ್ತಿತ್ತು. ಜನ ಸಹ 'ಈ ಮಣ್ಣಿನ ಮನಿ ಬ್ಯಾಡಪ್ಪೊ ಯಪ್ಪಾ. ನಮಿಗೆ ಕೊಲ್ಲಿನ ಮನಿಗಳೇ ಬೇಕು ಎಂದು ಹೇಳುತ್ತಿದ್ದರು. ಆದರೆ ಸೋತರೂ ಮೀಸೆಮಣ್ಣಾಗಲಿಲ್ಲ ಎಂಬಂತೆ, ಮಣ್ಣಿನ ಮನೆಯ ಬಾಗಿಲ ಚೌಕಟ್ಟುಗಳು ಮಾತ್ರ ಉರುಳಿರಲಿಲ್ಲ. ಚೌಕಟ್ಟುಗಳ ಎಡಬಲಕ್ಕೆ ಸ್ಥಳೀಯ ಬಡಗಿಗಳು ಸೂರ್ಯಚಂದ್ರರನ್ನು ಕೆತ್ತಿದ್ದರು– ಆಚಂದ್ರಾರ್ಕವಾಗಿ ಮನೆ ಇರಲಿ ಎಂಬರ್ಥದಲ್ಲಿ. ಆದರೆ ಸೂರ್ಯ ಅವುಗಳ ಮೇಲೆ ಝಳ ಬಿಡುತ್ತ ತಮಾಶೆ ನೋಡುತ್ತಿದ್ದನು.



ಸಿರಿವಂತರ ಪಾಡು ಇನ್ನೂ ಶೋಚನೀಯವಾಗಿತ್ತು. ಅವರಿಗೆ ಪೂರ್ವಿಕರಿಂದ ಬಂದಿದ್ದ ವಾಡೆಯಂತಹ ಮನೆಗಳಿದ್ದವು. ಅವು ಬಿದ್ದಿರಲಿಲ್ಲ. ಆದರೆ ಪ್ರವಾಹದ ಸಮತಾವಾದದಲ್ಲಿ ಮುಳುಗೆದ್ದಿದ್ದವು. ಖಾಲಿಯಾದ ಊರಲ್ಲಿ ಅವು ಬೀದಿಗೆ ಬಿದ್ದ ದೊರೆಯಂತೆ ಒಂಟಿಯಾಗಿದ್ದವು. ಆ ದೊಡ್ಡಮನೆಯವರು ಶೆಡ್ಡಿಗೆ ಬರಲು ಮುಜುಗರ ಪಟ್ಟಕೊಂಡು ಅದರಲ್ಲೇ ಕಾಲತಳ್ಳುತ್ತಿದ್ದರು; ಸಮಾನ ಅಳತೆಯಲ್ಲಿ ಕಟ್ಟಿಕೊಡುವ ಹೊಸ ಮನೆಗಳಿಗೆ ಹೋಗುವುದು ಹೇಗೆಂಬ ಚಿಂತೆಯಲ್ಲಿ ಒದ್ದಾಡುತ್ತಿದ್ದರು. ನೆರೆಯು ಉಳ್ಳವರ ಹಮ್ಮಿಗೆ ವಿಚಿತ್ರ ಸವಾಲನ್ನು ಒಡ್ಡಿತ್ತು.

ಸಂಪೂರ್ಣ ಸ್ಥಳಾಂತರವಾಗಬೇಕಾದ ಕೆಲವು ಊರುಗಳಲ್ಲಿ ಮರದ ಕೆತ್ತನೆ ಮಾಡಿ ದೊಡ್ಡದೊಡ್ಡ ತೊಲೆಗಳಲ್ಲಿ ಕಟ್ಟಿದ ಜಮೀನುದಾರರ ಮನೆಗಳಿದ್ದವು. ತಮ್ಮ ಸಂತಾನದ ಹಲವು ತಲೆಮಾರುಗಳು ಬದುಕಬೇಕೆಂಬ ಉದ್ದೇಶದಿಂದ ಕಟ್ಟಿದ ಶತಮಾನಗಳ ಹಿಂದಿನ ಮನೆಗಳವು. ಜಲಪ್ರಳಯ ಅವುಗಳ ವಿಧಿಯನ್ನೇ ಬದಲಿಸಿಬಿಟ್ಟಿತ್ತು. ಮನೆಯೊಳಗೆ ಮಡುಗಟ್ಟಿ ನಿಂತಿದ್ದ ಕೆಸರಲ್ಲಿ ಹುಳುಗಳು ಪಿತಿಪಿತಿ ಅನ್ನುತ್ತಿದ್ದವು. ನೀರು ತಾಗದಷ್ಟು ಎತ್ತರದಲ್ಲಿ ಗೋಡೆಯ ಮೇಲಿದ್ದ ಹಿರಿಯರ ಫೋಟೊಗಳನ್ನು ತೆಗೆದಿರಲಿಲ್ಲ. ಮನೆಗೆ ಬಂದ ದುರವಸ್ಥೆ ಕಂಡೊ ನೀರು ಬಿದ್ದೊ, ದಿವಂಗತರ ಮುಖಗಳು ವಿವರ್ಣಗೊಂಡಿದ್ದವು.

'ಬಡಬಗ್ಗರ ಗುಡಿಸಲುಗಳ ಮುರಿದು ಗುಡಿಗಳ ಕಟ್ಟುವರೇನಗಾಗಿ ಎಂಬ ಸಾಲೊಂದು ಕುವೆಂಪು ಪದ್ಯದಲ್ಲಿ ಬರುತ್ತದೆ. ಬಹುತೇಕ ಊರುಗಳಲ್ಲಿ ಜನರ ಮನೆ ಬಿದ್ದಿದ್ದವು. ದೇವರ ಗುಡಿ ಚರ್ಚು ಮಸಜೀದುಗಳು ಗಟ್ಟಿಯಾಗಿ ನಿಂತಿದ್ದವು. ಹಾಗೆಂದು ಇವೇನು ಉಳ್ಳವರು ಕಟ್ಟಿದ ಶಿವಾಲಯಗಳಲ್ಲ. ಇಲ್ಲದವರು ಕಟ್ಟಿಕೊಂಡವು. ರೋಣ ತಾಲೂಕಿನ ಮಾಡಲಗೇರಿಯಲ್ಲಿ, ಅಕ್ಕಪಕ್ಕವಿದ್ದ ಮೊಹರಂ ಮಸೀದಿಯೂ ಹನುಮಪ್ಪನ ಗುಡಿಯೂ ಒಟ್ಟಿಗೆ ಕುಸಿದಿದ್ದವು. ಎರಡೂ ದೇವರುಗಳು, ಗೋಡೆ ಕುಸಿದು ಸೃಷ್ಟಿಯಾದ ಬೆಳಕಿನಲ್ಲಿ, ಪರಸ್ಪರರ ಮುಖ ನೋಡಿಕೊಳ್ಳುತ್ತಿದ್ದವು–ಸತ್ಯದರ್ಶನಕ್ಕೆ ನಡುವಿನ ಗೋಡೆಗಳು ಕುಸಿಯಬೇಕು ಎಂದು ಧ್ವನಿಸುವಂತೆ. ಖೈರವಾಡಿಗಿಯ ಶೆಡ್ಡುಗಳಲ್ಲಿ ಜನ ಹೊಸದಾಗಿ ಹುಟ್ಟಲಿರುವ ಊರಲ್ಲಿ ತಮಗೆ ಮಾತ್ರವಲ್ಲ, ತಮ್ಮ ದೇವರುಗಳಾದ ಹುಸೇನಪೀರಾ ದ್ಯಾವಮ್ಮ ಹಣಮಂತ ದುರ್ಗಮ್ಮರಿಗೂ ತಕ್ಕ ಕಟ್ಟಡಗಳಾಗಬೇಕೆಂದು ದೃಢವಾಗಿ ಹೇಳಿದರು. ಬಿಸನಾಳಕೊಪ್ಪದ ನಿರ್ಜನ ಮಠದಲ್ಲಿ ಹಾಡುತ್ತ ಅಳುತ್ತಿದ್ದ ಇಬ್ಬರು ಅಜ್ಜಿಯರನ್ನು ಭೇಟಿ ಮಾಡಿದೆವು. ಅವರ ದುಃಖಕ್ಕೆ ಕಾರಣ, ದೇವರಿಗೆ ನಿತ್ಯಪೂಜೆ ಇಲ್ಲದಂತಾಯತ್ತಲ್ಲ ಎಂಬುದಗಿತ್ತು. ತಮ್ಮ ಮನೆ ಬಿದ್ದರೂ, ತಮ್ಮೂರು ಅಳಿದರೂ, ದೇವರ ಮೇಲಿನ ಜನರ ಶ್ರದ್ಧೆ ಕುಸಿದಿರಲಿಲ್ಲ.

ಶೆಡ್ಡುವಾಸಿಗಳ ವನವಾಸದ ಪರಿಯೇ ಬೇರೆ. ಇರುವ ಮನೆ ಬಿದ್ದಿದೆ. ಹೊಸಮನೆ ಸಿಕ್ಕಿಲ್ಲ. ಅದು ಸಿಗುವುದು ಎಂದೊ ಏನೊ? ಶೆಡ್ಡಿನ ಕಷ್ಟಗಳು ಅನಂತ ಮತ್ತು ಅವ್ಯಕ್ತವಾಗಿದ್ದವು. ಪಿಸುಗುಟ್ಟಿದರೂ ಪಕ್ಕದ ಶೆಡ್ಡಿಗೆ ಕೇಳಿಸುತ್ತದೆ. ಬಿಸಿಲಿಗೆ ಅವು ಕಾದ ಕಾವಲಿಯಾಗುತ್ತವೆ. ಗಾಳಿಯಾಡುವುದಿಲ್ಲ. ಅನಿಶ್ಚಿತತೆಯಲ್ಲಿ ಬದುಕುವುದಕ್ಕಿಂತ ಘೋರವಾದದ್ದು ಬೇರೆಯಿರಲಿಕ್ಕಿಲ್ಲ. ವರಗೊಡದಿನ್ನಿಯಲ್ಲಿ ಎರಡು ವರ್ಷದಿಂದ ಶೆಡ್ಡುವಾಸ ಮಾಡುತ್ತಿರುವವರ ಮುಖದ ಮೇಲಿದ್ದ ಖಿನ್ನತೆ, ಸಂಗಮದ ನೀರಲ್ಲಿ ಉಜ್ಜಿತೊಳೆದರೂ ಹೋಗದಷ್ಟು ಆಳವಾಗಿ ಮುದ್ರೆಯೊತ್ತಿತ್ತು. ಅವರು ಹಡಗು ಒಡೆದು ಸಮುದ್ರದ ನಡುಗಡ್ಡೆಯಲ್ಲಿ ಸಿಲುಕಿಕೊಂಡ ಪ್ರವಾಸಿಗರಂತೆ ತೋರುತ್ತಿದ್ದರು.

ಶೆಡ್ಡಿಲ್ಲದ ಕಡೆ ಜನ ಸ್ಕೂಲು ಹಾಗೂ ಸೊಸೈಟಿಗಳನ್ನೇ ಮನೆ ಮಾಡಿಕೊಂಡಿದ್ದರು. ಗದಗ ಜಿಲ್ಲೆಯ ಹೊಳೆಮಣ್ಣೂರಿನ ಸ್ಕೂಲಿನಲ್ಲಿ, ಜನ ಒಲೆಹೂಡಿ ಅಡುಗೆ ಮಾಡುತ್ತಿದ್ದರು. ಕ್ಲಾಸ್‌ರೂಮಿನಲ್ಲಿದ್ದ ಜ್ಞಾನಪೀಠ ಪಡೆದ ಸಾಹಿತಿಗಳು, ತಮ್ಮ ಬರೆಹದಲ್ಲೂ ಇಂತಹ ಬದುಕು ಇರಲಿಲ್ಲವಲ್ಲ ಎಂದು ಚಿತ್ರಪಟದ ಫ್ರೇಮಿನೊಳಗಿಂದ ಬೆಕ್ಕಸಗೊಂಡು ನೋಡುತ್ತಿದ್ದರು. ಸ್ಕೂಲಿನ ವರಾಂಡದ ಕಂಬಕ್ಕೆ ಕರುವೊಂದನ್ನು ಕಟ್ಟಲಾಗಿತ್ತು. ಅದು ಗೋಡೆ ಮೇಲೆ ಬರೆದ ಭಾರತ ಭೂಪಟಕ್ಕೆ ಆನಿಸಿಕೊಂಡು ನಿಂತಿತ್ತು. ಭೂಪಟದ ಮೇಲ್ಭಾಗದಲ್ಲಿ 'ಜೀವನ ಒಂದು ಅಂತ್ಯವಿಲ್ಲದ ಪ್ರಯೋಗಶಾಲೆ ಎಂದು ಬರೆದಿತ್ತು.

ಹಚೊಳ್ಳಿಯಲ್ಲಿ ಒಬ್ಬ ಮುದುಕಿ ಬಿಟ್ಟುಹೋಗುವುದು ಹೇಗೆಂದೊ ಇಲ್ಲಿಮಟ ನೀರು ಬರಲಾರದೆಂದೊ, ಮನೆಯಲ್ಲೆ ಉಳಿದಿತ್ತು. ಆದರೆ ಮನೆತುಂಬ ನೀರು ತುಂಬಿಕೊಂಡು ಅದು ಪ್ರಾಣಬಿಡಬೇಕಾಯಿತು. ಎಲ್ಲ ಕಡೆಯಲ್ಲೂ ಮನೆ ವಿಷಯದಲ್ಲಿ ಮಹಿಳೆಯರೇ ಸಂಕಟಕ್ಕೀಡಾಗುತ್ತಾರೇಕೆ? ಮನೆಯ ಜಗತ್ತಿಗೆ ಅವರನ್ನು ಸೀಮಿತ ಮಾಡಿರುವುದರಿಂದಲೇ ಅಥವಾ ರೈತಾಪಿ ಮಹಿಳೆಗೆ ಮನೆಯೆನ್ನುವುದು ಐಡೆಂಟಿಟಿ ಆಗಿರುವುದರಿಂದಲೇ? ಬಹುಶಃ ಮನೆ ಆಕೆಗೆ ಕಲ್ಲುಮಣ್ಣುಗಳ ಕಟ್ಟಡ ಮಾತ್ರವಲ್ಲ. ಕರ್ಮಭೂಮಿ; ಅವಳ ಗಂಡ ಮಕ್ಕಳು ದನ ಕುರಿ ಕೋಳಿ ಒಂದೇ ಸೂರಡಿಯಲ್ಲಿ ಬದುಕುವ ತಾವು; ಅವಳು ಅಡುವ ಬಡಿಸುವ ಪೂಜಿಸುವ ಕನಸು ಕಾಣುವ ಜಗಳವಾಡುವ ಕಷ್ಟಸುಖ ಹಂಚಿಕೊಳ್ಳುವ ತಾಣ. ಲಂಕೇಶರ 'ಅವ್ವ ಪದ್ಯದ ಸಾಲೊಂದು ನೆನಪಾಗುತ್ತಿದೆ: "ನನ್ನವ್ವ ಬದುಕಿದ್ದು ಕಾಳುಕಡ್ಡಿಗೆ, ದುಡಿತಕ್ಕೆ, ಮಕ್ಕಳಿಗೆ: ಮೇಲೊಂದು ಸೂರು, ಅನ್ನ ರೊಟ್ಟಿ ಹಚಡಕ್ಕೆ; ಸರೀಕರ ಎದುರು ತಲೆಯೆತ್ತಿ ನಡೆಯಲಿಕ್ಕೆ. ಎಂತಲೇ ಇರಬೇಕು– ಕೆಲವು ಕಡೆ ಮಹಿಳೆಯರು ಶೆಡ್ಡಿಗೂ ಸರ್ಕಾರ ಕೊಡಲಿರುವ ಹೊಸಮನೆಗೂ ಕಾಯದೆ, ಬಿದ್ದಮನೆಗೇ ಮತ್ತೆ ಕಟ್ಟಿಕೊಳ್ಳಲು ಮಣ್ಣು ಮೆತ್ತುತ್ತಿದ್ದರು. ಮನೆಗೆ ಗ್ರಾಮೀಣ ಮಹಿಳೆಯ ಬಾಳಿನಲ್ಲಿರುವ ಮಹತ್ವ ಅರಿತಿದ್ದರೆ, ನಮ್ಮ ವ್ಯವಸ್ಥೆ ಕಟ್ಟಿಸಿಕೊಡಲು ಇಷ್ಟೊಂದು ವಿಳಂಬ ನಿರ್ಲಕ್ಷ್ಯ ಮಾಡುತ್ತಿತ್ತೇ?

ವರ್ಷವಾದ ಬಳಿಕ ಸರ್ಕಾರದಿಂದ ಕೆಲವು ಮನೆಗಳು ಸಿದ್ಧವಾಗಿವೆ. ಆದರೆ ಅವುಗಳ ಒಳಗೆ ಹೋಗಲು ಜನ ಒಪ್ಪುತ್ತಿಲ್ಲ ಎಂಬ ವರದಿಗಳು ಬರತೊಡಗಿವೆ; ಈ ಬಗ್ಗೆ ನಾವು ಸಾರ್ವಜನಿಕ ಪತ್ರವನ್ನು ಪತ್ರಿಕೆಗಳಲ್ಲಿ ಬರೆದು ಎಚ್ಚರಿಸಿದ್ದೆವು. ಆದರೂ ರೈತಾಪಿಗಳ ಮೇಲೆ ಜನತಾ ಮನೆಗಳನ್ನೇ ಹೇರಲಾಯಿತು. ರೈತಾಪಿ ದೇಶದಲ್ಲಿ ಆಡಳಿತ ಮಾಡುವವರಿಗೆ ಹಳ್ಳಿಗರ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವ ಸೂಕ್ಷ್ಮತೆಯಿಲ್ಲ ಎಂದರೆ ಏನು ಮಾಡುವುದು?

ಮಸೀದಿ ಗುಡಿ ವಿಷಯದಲ್ಲಿ ದೇಶವೀಗ ವಿಚಿತ್ರ ಬಿಕ್ಕಟ್ಟನ್ನು ಎದುರಿಸುತ್ತಿದೆ. ದೇವರಮನೆಗಳನ್ನು ಕಟ್ಟಲು ಅವನ ಸೃಷ್ಟಿ ಎನ್ನಲಾಗುವ ಪ್ರಜೆಗಳನ್ನು ಬಲಿಕೊಡಲೂ ಹಿಂಜರಿಯದವರು ಇರುವ ನಾಡಲ್ಲಿ, ಶವದಂತೆ ಬಿದ್ದಿರುವ ಮನೆಯ ಮುಂದೆ ರೋದಿಸುವ, ಪುಟ್ಟಿ ಹಾಳ್ಮಣ್ಣಿಗೆ ಹೋರಾಟ ಮಾಡುವ, ನೆಲದ ಕೆಸರು ಆರುವ ಮುನ್ನವೇ ಮಣ್ಣುಮೆತ್ತಿ ಗೋಡೆ ಕಟ್ಟಿಕೊಳ್ಳುವ, ಶೆಡ್ಡುಬಿಟ್ಟು ಹೊಸಮನೆಗೆ ಎಂದು ಹೋದೇವು ಎಂದು ತಲ್ಲಣಿಸುವ ಮಂದಿ ಬಗ್ಗೆ ತಲೆಕೆಡಿಸಿಕೊಳ್ಳುವವರು ಯಾರು? ಕುಸಿದು ಬಿದ್ದಿರುವುದು ಮನೆಗಳು ಮಾತ್ರವಲ್ಲ. (15 ವರುಷಗಳ ಹಿಂದೆ ಮಲಪ್ರಭೆ ಮತ್ತು ತುಂಗಭದ್ರಾ ತೀರದ ಹಳ್ಳಿಗಳಿಗೆ ಹೋದಾಗ ಬರೆದ ಬರೆಹ: ನಡೆದಷ್ಟೂ ನಾಡು ಸಂಕಲನದಿಂದ)



## ಕವಿ ಮನಸು

### ಕುಡಿದವನಲ್ಲ.. ಮಡಿದವ

ಬಡಕಲು ದೇಹದೆ ನಡುಗುತಲಿದ್ದನು
ಕಡೆಗವ ಬಿದ್ದ ರಸ್ತೆಯಲಿ
ಕುಡಿದಿಹನೆನ್ನುತ ಹಿಡಿಯಲು ಬಾರದೆ
ನಡೆದರು ಮಂದಿ ದೂರದಲಿ

ಇತ್ತದು ಅವನಿಗೆ ತುತ್ತಿನ ಕಾತರ
ಹೊತ್ತಿದೆ ಬೆಂಕಿ ಉದರದಲಿ
ಕತ್ತನು ಮೇಲಕೆ ಎತ್ತಲಶಕ್ತನು
ಮತ್ತಿನ ಆಸೆ ಅವಗೆಲ್ಲಿ?

ಅರಚಿದನಾತನು ಕಿರುಚಿದ ಮೆಲ್ಲಗೆ
ನರಳಿಕೆ ಬಳಿಕ ನಿಂತಿತ್ತು
ತೆರಳಿದನಾತನು ಮರಳದ ಜಾಗಕೆ
ಧರೆಯಲಿ ತನುವು ಒರಗಿತ್ತು

ಮಡಿದಿಹ ವ್ಯಕ್ತಿಯ ಮಡಚಿದ ಮುಷ್ಟಿಯ
ನಡುವಲಿ ಚೀಟಿ ಒಂದಿತ್ತು
ಅಡಕವು ಅದರಲಿ ತಡೆಯದ ಹಸಿವಿಗೆ
ಹುಡುಕಿರಿ ಮದ್ದು ಎಂದಿತ್ತು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಹೆಜ್ಜೆ ನೀನು ಗೆಜ್ಜೆ ನಾನು

ಹೆಜ್ಜೆ ನೀನು ಗೆಜ್ಜೆ ನಾನು
ಶ್ರುತಿಯು ನೀನು ಲಯವು ನಾನು
ರಾಗ ನೀನು ತಾಳ ನಾನು
ಸ್ವರವು ನೀನು ಸಂಗೀತ ನಾನು

ಕೃಷ್ಣ ರಾಧೆ ಪ್ರೀತಿ ತರಹ
ಜೊತೆಗೆ ಇರಲಿ ನಿನ್ನ ಸನಿಹ
ಬೇಡ ಎಂದೂ ಮುನಿಸು ವಿರಹ
ಪ್ರತಿಪುಟದಿ ಇರಲಿ ಪ್ರೇಮ ಬರಹ

– ಚೇತನ ಭಾರ್ಗವ ಬೆಂಗಳೂರು

### ವಿಕೋಪ

ಪ್ರಕೃತಿಯ ಒಡಲಲ್ಲಿ ಬರಿದಾದ ಕೂಗು
ವಿಕೋಪದ ಅಪತ್ತಿಗೆ ಬಲಿಯಾದವರೆಷ್ಟು
ಮರ ಗಿಡಗಳ ಅಳಿದು ಎತ್ತರದ ಮನೆಗಳು
ಗಾಳಿ ಬೆಳಕಿಲ್ಲದೆ ಕೃತಕ ಗಾಳಿ ಬೆಳಕಿಗೆ
ಸೋತವರು

ಕೊರೆದು ಕೊರೆದು ಬಂಜಾರಾಗಿದೆ ಇಳೆಯು
ನಿಲುಕದಷ್ಟು ಮಾನವನ ಆಸೆಯು
ಮುಗಿಯದು
ಸಹಿಸಿದಷ್ಟು ಭೂಮಿ ಬಿರಿದು ಆಕಾಶ ಬಿಡದೆ
ಮಳೆಯ ಸುರಿದು
ತತ್ತರಿಸಿ ಹೋದವರು ಇಲ್ಲಿ ಸಾಕಷ್ಟು

ಮಾನವ ಎಷ್ಟೇ ಮುಂದುವರೆದರೇನು
ಪ್ರಕೃತಿಯ ವಿಕೋಪದ ಮುಂದೆ
ನಲುಗುವನು
ಮನಗಳು ಕೊಚ್ಚಿ ಹೋಗುತಿರುವಾಗ
ಉಳಿವಿಗಾಗಿ ದೇವರ ಮೊರೆಯಿಡುತ್ತಿರುವಾಗ

ಇನ್ನಾದರೂ ಅರಿಯ ಬೇಕಿದೆ
ಪ್ರಕೃತಿ ಉಳಿಯ ಬೇಕಿದೆ
ಮುಂದಿನ ಪೀಳಿಗೆಗೆ ಸ್ವಚ್ಛ ಗಾಳಿ ಬೆಳಕು
ಬೇಕಾಗಿದೆ
ಅರಿತು ಬಾಳಿದರೆ ಉಳಿಗಾಲ ಇಲ್ಲದೆ
ಹೋದರೆ ಅಳಿಗಾಲ

– ವಾಣಿ

ಉಚಿತ-ಖಚಿತ!
ಪತ್ರಿಕೆಯ ಓದು ಕಣ್ಣಿಗೆ ಹಿತ, ಮೊಬೈಲ್ ಓದು ಉಚಿತ, ಕಣ್ಣಿಗೆ ಹಾನಿ ಖಚಿತ!
ಮಕ್ಕಳ ಕೈಗೆ ಮೊಬೈಲ್ ಬದಲಿಗೆ, ಪತ್ರಿಕೆ ನೀಡಿ ಬದಲಾವಣೆ ಕಾಣಿರಿ...
ಸ್ಥಳೀಯ ಸುದ್ದಿಗಳಿಗಾಗಿ ಹಂಪಿ ಟೈಮ್ಸ್ ಪತ್ರಿಕೆ ಓದಿರಿ
ಹಂಪಿ ಟೈಮ್ಸ್ ಬಳಗದ ಕಳಕಳಿ
ಬೆಲೆ ರೂ 2

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ತಲೆಮಾರುಗಳ ಅಂತರ

ಮುಂದುವರೆದ ಭಾಗ

ಮಾತಾಡಲು ಸೆಲ್ ಫೋನ್ ಗಳು ಇಲ್ಲದ ಆ ಕಾಲದಲ್ಲಿ ನಿಜವಾದ ಸ್ನೇಹಿತರೊಂದಿಗೆ ಮನ ಬಿಚ್ಚಿ ಮಾತಾಡಲು, ಒಡನಾಡಲು, ಆಟವಾಡಲು ಸಾಕಷ್ಟು ಸಮಯ ನಮಗಿತ್ತು. ಬೇಕೆಂದಾಗ ಹೇಳದೆ ಕೇಳದೆ ಸ್ನೇಹಿತರ ಮನೆಗೆ ಹೋಗಿ ಅವರ ಮನೆಯಲ್ಲಿ ಮಾಡಿದ ಅಡುಗೆಯನ್ನು ಪಟ್ಟಾಗಿ ಉಂಡು ಹರಟೆ ಹೊಡೆದು ಬರುತ್ತಿದ್ದೆವು. ಅವರೂ ಅಷ್ಟೇ ಅಯ್ಯೋ, ಊಟದ ಸಮಯಕ್ಕೆ ಬಂದರಲ್ಲ ಎಂದು ಹೆದರುತ್ತಿರಲಿಲ್ಲ. ತಮ್ಮ ಮಕ್ಕಳಷ್ಟೇ ಪ್ರೀತಿಯಿಂದ ನಮಗೂ ಬಡಿಸಿ ಸಂತಸ ಪಡುತ್ತಿದ್ದರು. ಅಪ್ಪ, ಅಮ್ಮ, ಅತ್ತೆ, ಮಾವ, ಅಜ್ಜ, ಅಜ್ಜಿ,ಚಿಕ್ಕಪ್ಪ, ಚಿಕ್ಕಮ್ಮ ಮುಂತಾದ ಸಂಬಂಧಗಳಲ್ಲಿ ಪ್ರೀತಿ, ವಿಶ್ವಾಸ, ಆತ್ಮೀಯತೆಗಳಿದ್ದವು. ಮನೆಯ ಹಿರಿಯರು ಹೇಳಿದ ಮಾತುಗಳು ಕಡ್ಡಾಯವಾಗಿ ಪಾಲಿಸಲೇಬೇಕಾದ ವೇದ ವಾಕ್ಯಗಳಾಗಿದ್ದವು.

ಫೋಟೋ ತೆಗೆಸಿಕೊಳ್ಳುವುದು ನಮಗೆ ದುಬಾರಿ ಹವ್ಯಾಸವಾಗಿತ್ತು. ಆಗ ಯಾವಾಗಲೋ ಒಮ್ಮೆ ಮನೆ ಮಂದಿಯೆಲ್ಲ ಒಂದು ಫ್ಯಾಮಿಲಿ ಫೋಟೋಗೆ ಪೋಸ್ ಕೊಡುತ್ತಿದ್ದೆವು. ಅದನ್ನು ಮನೆಯ ಪಡಸಾಲೆಯಲ್ಲಿ ಕಟ್ಟು ಹಾಕಿಸಿ ನೇತು ಹಾಕಿರುತ್ತಿದ್ದೆವು. ಪದವೀಧರರಾದರೆ ಮಾತ್ರ ಕಡ್ಡಾಯವಾಗಿ ಕರಿಕೋಟು ಧರಿಸಿ ತಲೆಯ ಮೇಲೆ ಹ್ಯಾಟ್ ಹಾಕಿಕೊಂಡು ಕೈಯಲ್ಲಿ ಪದವಿ ಸರ್ಟಿಫಿಕೇಟ್ ನ್ನು ಹಿಡಿದುಕೊಂಡ ಕಪ್ಪು ಬಿಳುಪಿನ ಚಿತ್ರ ಕುಟುಂಬದ ಹೆಮ್ಮೆಯಾಗಿ ಮನೆಯ ಪಡಸಾಲೆಯಲ್ಲಿ ಪ್ರದರ್ಶಿತವಾಗುತ್ತಿತ್ತು. ಚಿತ್ರಗಳು ಕಪ್ಪು ಬಿಳುಪಾಗಿದ್ದರೂ ಅವುಗಳು ನಮ್ಮ ಬಾಲ್ಯದ ಬದುಕಿನ ಬಣ್ಣದ ನೆನಪಿನ ಚಿತ್ತಾರಗಳಾಗಿದ್ದವು.

ತಂದೆ ತಾಯಿಯರನ್ನು ದೇವರ ಸ್ವರೂಪ ಎಂದು ಭಾವಿಸಿದ ತಲೆಮಾರು ನಮ್ಮದು. ನನ್ನ ಎಷ್ಟೋ ಸ್ನೇಹಿತರು ಮನೆಯ ಮತ್ತು ದೇವರ ಪೂಜೆಯ ಉಸ್ತುವಾರಿ ವಹಿಸಿಕೊಳ್ಳಲು ಒಂದೆರಡು ವರ್ಷ ಶಾಲೆ ಬಿಟ್ಟದ್ದು ಉಂಟು. ಅಂದು ನಮ್ಮ ಪಾಲಕರ ಮಾತನ್ನು ಕೇಳಿದ ನಾವು ಇಂದು ನಮ್ಮ ಮಕ್ಕಳ ಮಾತನ್ನು ಪಾಲಿಸುತ್ತಿರುವ ಮೊದಲ ಪೀಳಿಗೆಯವರಾಗಿದ್ದೇವೆ. ನಮ್ಮ ತಪ್ಪುಗಳನ್ನು ತಿದ್ದಲು ನಮ್ಮ ಪಾಲಕರೇ ಆಗಬೇಕೆಂದಿರಲಿಲ್ಲ.. ಊರಿನ ಯಾರು ಬೇಕಾದರೂ ನಮ್ಮ ಕಿವಿ ಹಿಂಡಿ ಬೈದು ಬುದ್ಧಿ ಹೇಳುತ್ತಿದ್ದರು.ಅದನ್ನು ಮನೆಗೆ ಬಂದು ಹೇಳುತ್ತಲೂ ಇರಲಿಲ್ಲ ನಾವು, ಹಾಗೇನಾದರೂ ಹೇಳಿದರೆ ಇನ್ನೂ ನಾಲ್ಕು ಏಟು ಹೆಚ್ಚಾಗಿ ಬೀಳುತ್ತಿತ್ತು ಅಷ್ಟೇ!.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper


ಹೆಣ್ಣುಮಕ್ಕಳೊಂದಿಗೆ ಸ್ನೇಹವಂತೂ ದೂರ...ಕಣ್ಣೆತ್ತಿ ಮಾತನಾಡುತ್ತಿರಲಿಲ್ಲ ಕೂಡ. ಎಷ್ಟೋ ಜನರು ತಾವು ಯಾವುದಾದರೂ ಹುಡುಗಿಯನ್ನು ಇಷ್ಟಪಟ್ಟರೂ ಕೂಡ ಅದನ್ನು ಹೇಳಿಕೊಳ್ಳಲಾಗದೆ, ಪತ್ರ ಬರೆದು ತಿಳಿಸಲೂ ಆಗದೆ ಒದ್ದಾಡುತ್ತಿದ್ದರು. ಮತ್ತೆ ಕೆಲವೊಮ್ಮೆ ಆಕೆಯ ಮದುವೆಯಲ್ಲಿ ಹೆಣ್ಣಿನ ಕಡೆಯವರಾಗಿ ಓಡಾಡುತ್ತಿದ್ದರು. ಋಣಾನುಬಂಧವಿಲ್ಲ ಎಂಬುದೊಂದೇ ಅವರ ಮಾತಾಗಿತ್ತು... ಈಗಿನವರಂತೆ ಪ್ರೀತಿಸುವ, ಬೇಡವಾದರೆ ಕೈಬಿಡುವ, ಕೊಲೆ ಮಾಡುವ ಎಸಿಡ್ ಎರಚುವ ಜಾಯಮಾನ ಅಂದಿನವರಲ್ಲಿರಲಿಲ್ಲ. ಹರೆಯದ ಪ್ರೀತಿಯನ್ನು ಬಹುಮೂಲ್ಯ ಆಸ್ತಿ ಎಂಬಂತೆ ತಮ್ಮ ನೆನಪಿನ ಕಣಜಗಳಲ್ಲಿ ಜತನವಾಗಿ ಇಟ್ಟುಕೊಳ್ಳುತ್ತಿದ್ದರು ಅಂದಿನ ಜನ.

ಮೂರು ತಲೆಮಾರಿನ ಜನ ಒಟ್ಟಾಗಿ ಒಂದೇ ಮನೆಯಲ್ಲಿ ವಾಸಿಸುತ್ತಿದ್ದೆವು. ಇನ್ನು ನಮ್ಮ ಮನೆಗಳು ಗಟ್ಟಿ ಮುಟ್ಟಾದ ಕಂಬಗಳ ಮೇಲೆ ಅಡುಗೆಮನೆ ದೇವರಮನೆ, ಪಡಸಾಲೆ, ವಾರಪಡಸಾಲೆ, ಮುಖ್ಯವಾಗಿ ದನದ ಹಕ್ಕಿಯನ್ನು ಹೊಂದಿರುತ್ತಿದ್ದವು. ವಾರಪಡಸಾಲೆಯಲ್ಲಿ ಒಂದೆರಡು ವರ್ಷಗಳ ಜೋಳ ಗೋದಿ ಅಕ್ಕಡಿಕಾಳುಗಳ ಚೀಲಗಳ ನಿಟ್ಟು, ಒಕ್ಕಲುತನಕ್ಕೆ ಬೇಕಾಗುವ ಸಣ್ಣಪುಟ್ಟ ಸಾಮಾನುಗಳು, ಚೀಲ, ಪುಟ್ಟಿ, ಸೇರು, ಮೊರ, ಕೆರೆಸಿ ಮನೆಯ ಮುಂದಿನ ಕಟ್ಟೆಯ ಮೇಲೆ ಒಂದು ಬಂಕದ ಕೋಣೆ ಇದ್ದರೆ ಅದು ಆ ಮನೆಯ ಅತಿಹೆಚ್ಚಿನ ಲಕ್ಸ್ಯುರಿ. ವಾರಕ್ಕೊಮ್ಮೆ ಮನೆಯ ಒಳ ಹೊರಗಿನ ನೆಲವನ್ನು ಸಗಣಿಯಿಂದ ಸಾರಿಸಿದರೆ, ಅಂಚುಗಳಲ್ಲಿ ಸುಣ್ಣದ ಮತ್ತು ಕೆಮ್ಮಣ್ಣು ಪಟ್ಟಿಯನ್ನು ಎಳೆದು ಸುಂದರಗೊಳಿಸುತ್ತಿದ್ದರು. ಪ್ರತಿ ಮನೆಯ ಮಕ್ಕಳು ಶನಿವಾರ ದಿನ ಸ್ನಾನ ಮಾಡಿ ಮಡಿಬಟ್ಟೆಯುಟ್ಟು ಒಂದು ಸಣ್ಣ ಲೋಟದಲ್ಲಿ ಎಣ್ಣೆ ಬತ್ತಿ ಎರಡು ಊದಿನ ಕಡ್ಡಿ ಹಿಡಿದು ಊರ ಮುಂದಣ ಹನುಮಪ್ಪನ ಗುಡಿಗೆ ಹೋಗುತ್ತಿದ್ದೆವು. ಬಹುಶಹ ಅಂದಿಗೂ ಇಂದಿಗೂ ಎಂದೆಂದಿಗೂ ಸಲ್ಲುವ ಯುನಿವರ್ಸಲ್ ದೇವರು ಹನುಮಪ್ಪ ಮಾತ್ರ ಎಂದೆನಿಸುತ್ತದೆ.

ಹಬ್ಬ ಹರಿದಿನಗಳಲ್ಲಿ ದನ ಕರುಗಳನ್ನು ಹತ್ತಿರದ ಕೆರೆ ಹಳ್ಳಗಳಿಗೆ ತೆಗೆದುಕೊಂಡೊಯ್ದು ಅವುಗಳ ಮೈ ತೊಳೆದು ಮನೆಗೆ ತಂದು ಅವುಗಳ ಕೋಡುಗಳಿಗೆ ಬಣ್ಣ ಹಚ್ಚಿ ಸಿಂಗಾರ ಮಾಡಿ, ಬಣ್ಣ ಬಣ್ಣದ ರಿಬ್ಬನ್ ಕಟ್ಟಿ ಸಂಭ್ರಮಿಸಿದರೆ ಮತ್ತೆ ಕಾರ ಹುಣ್ಣಿಮೆಯಂತಹ ಪ್ರತ್ಯೇಕ ಹಬ್ಬಗಳಲ್ಲಿ ದನಗಳಿಗೆ ಓಟದ ಸ್ಪರ್ಧೆ ನಡೆಸಿ ಗೆದ್ದ ಹೋರಿಯನ್ನು ಇಡೀ ಊರಲ್ಲಿ ಮೆರವಣಿಗೆ ಮಾಡುತ್ತಿದ್ದೆವು. ಇನ್ನು ಮಣ್ಣೆತ್ತಿನ ಅಮಾವಾಸ್ಯೆಯ ದಿನ ನಮ್ಮ ರೈತಾಪಿ ಬದುಕಿಗೆ ನೆರವಾಗುವ ಮಣ್ಣಿನ ಎತ್ತುಗಳ ಪ್ರತಿರೂಪವನ್ನು ನಾವೆಲ್ಲ ಮಕ್ಕಳು ಸೇರಿ ತಯಾರಿಸಲು ಹಳ್ಳದ ದಂಡೆಯಿಂದ ಹದವಾಗಿ ಜಿಗುಟು ಮಣ್ಣನ್ನು ತಂದು ಹದವಾಗಿ ನಾದಿ ಮುದ್ದಾದ ಬಸವಣ್ಣನ ಮೂರ್ತಿಗಳನ್ನು ತಯಾರಿಸಿ ಪೂಜಿಸಲು ಅಮ್ಮನ ಬಳಿ ಕೊಡುತ್ತಿದ್ದೆವು.

ಇನ್ನು ಬೇಸಿಗೆ ರಜದಲ್ಲಿ ಮನೆಗೆ ವರ್ಷಕ್ಕೆ ಬೇಕಾಗುವ ಕಟ್ಟಿಗೆ ತಂದು ಹಾಕುವುದು, ದಂದಕ್ಕಿ ( ದನದ ಹಕ್ಕಿ) ಯ ಕಸ ಹೊಡೆಯಲು ಬೇಕಾಗುವ ಬರಲುಗಳನ್ನು ತಯಾರಿಸುವ ಬಂದರಕಿ ಕಟ್ಟಿಗೆಯನ್ನು ಸಂಗ್ರಹಿಸುವುದು ಕೂಡ ನಮ್ಮ ಕೆಲಸವಾಗಿತ್ತು. ಊರಿಗೆ ಹತ್ತಿರದ ಗುಡ್ಡಗಾಡಿನಲ್ಲಿ ಸಿಗುವ ಕಟುಗ( ಒಂದು ರೀತಿಯ ಗರುಸಿನಂತಹ ವಸ್ತು )ನ್ನು ತಂದು ದನದ ಹಕ್ಕಿಯನ್ನು ಸಮತಟ್ಟಾಗಿಸಿ ದನ ಕರುಗಳು ಆರಾಮಾಗಿ ಮಲಗಲು ಅನುಕೂಲವಾಗುವಂತೆ ಮಾಡುತ್ತಿದ್ದೆವು. ದನ ಕರುಗಳು, ನಾಯಿ, ಕುರಿ, ಕೋಳಿ ಹೀಗೆ ಮನೆಯಲ್ಲಿ ಎಲ್ಲ ಪ್ರಕಾರದ ಜೀವಿಗಳೊಂದಿಗೆ ನಮ್ಮ ಸಹ ಜೀವನ ಸಾಗುತ್ತಿತ್ತು.

ಇನ್ನು ವರ್ಷಕ್ಕೊಮ್ಮೆ ಊರ ಜಾತ್ರೆ,ಉತ್ಸವಗಳಲ್ಲಿ ಆಡುವ ದೊಡ್ಡಾಟ, ಬಯಲಾಟ,ನಾಟಕಗಳು ನಮ್ಮ ಪಾಲಿನ ಅತಿ ದೊಡ್ಡ ಮನರಂಜನೆಗಳಾದರೆ, ಪ್ರತಿ ವಾರದ ಸಂತೆಯಲ್ಲಿ ಹಾವಾಡಿಗರು, ಕರಡಿ ಕುಣಿತದವರು, ಸುಡುಗಾಡ ಸಿದ್ದರು, ಭವಿಷ್ಯ ಹೇಳುವ ಬಾಲಬಸವರು, ಮುಳ್ಳಾವಿಗೆಯ ಮೇಲೆ ಗಂಟೆಗಟ್ಟಲೆ ನಿಲ್ಲುವ ಸನ್ಯಾಸಿಗಳು, ವೇಷಗಾರರು, ದೊಂಬರಾಟಗಾರರು,ಮೋಡಿ–ಕಣ್ ಕಟ್ಟು ಮಾಡುವವರು, ದುರ್ಗ ಮುರುಗಿಗಳು, ಆಗಾಗ ಪೆಟ್ಟಿಗೆಯೊಂದರಲ್ಲಿ ಮಾಯಾ ಬಜಾರ್ ತೋರಿಸುವವನು ಬಾಂಬೈ ಬಜಾರ ನೋಡು ಎಂದು ರಾಗವಾಗಿ ಹೇಳುತ್ತಾ ಮನೆಯ ಬಳಿ ಸುಳಿಯುವವರು ನಮಗೆ ಮನರಂಜನೆ ನೀಡುತ್ತಿದ್ದರು. ಬೆನ್ನಿಗೆ ಮಗುವನ್ನು ಕಟ್ಟಿಕೊಂಡು ತಲೆಯ ಮೇಲೆ ದೇವಿಯ ಮೂರ್ತಿಯ ಪುಟ್ಟಿಯನ್ನು ಹೊತ್ತ ಹೆಣ್ಣು ಮಕ್ಕಳು ಕೊರಳಿಗೆ ನೇತು ಹಾಕಿಕೊಂಡ ಡೋಲನ್ನು



ಬಾರಿಸುತ್ತಾ ಬಂದರೆ ಓಡಿ ಹೋಗಿ ಆಕೆಯ ಮುಂದೆ ನಾವು ನಿಲ್ಲುತ್ತಿದ್ದೆವು... ಕೆಲವೊಮ್ಮೆ ಆಕೆಗೆ ಗೊತ್ತಿಲ್ಲದೆ ಹತ್ತಿಗೆ ಕೊಬ್ಬರಿ ಎಣ್ಣೆ ಸವರಿ ಆಕೆಯ ಡೋಲಿನ ಚರ್ಮಕ್ಕೆ ಹಚ್ಚಿ ಆಕೆ ಬಾರಿಸಿದಾಗ ಶಬ್ದ ಬಾರದಂತೆ ಆದಾಗ ಆಕೆ ಪರದಾಡುವುದನ್ನು ನೋಡಿ ಮುಸಿಮುಸಿ ನಕ್ಕು ಆಕೆಯ ಬೈಗುಳಿಗೆ ನಾವು ಪಾತ್ರರಾದರೆ, ಮನೆಯಲ್ಲಿನ ಅಜ್ಜಿ, ಅಮ್ಮಂದಿರು ಆಕೆಯ ಜೋಳಿಗೆಗೆ ತುಸು ಹೆಚ್ಚೇ ಜೋಳ ಹಾಕಿ ಸಮಾಧಾನ ಮಾಡುತ್ತಿದ್ದರು.

ಸಾಯಂಕಾಲದ ಸಮಯದಲ್ಲಿ ಸೊಳ್ಳೆ ಓಡಿಸಲು ದಂದಕ್ಕಿಯಲ್ಲಿ ಒಂದು ಪುಟ್ಟಿಯಲ್ಲಿ ಹಾಕಿ ಉರಿ ಹಚ್ಚಿ ಹೊಗೆ ಎಬ್ಬಿಸುವುದರಿಂದ ಸೊಳ್ಳೆ ಕ್ರಿಮಿ ಕೀಟಗಳ ಬಾಧೆಯಿಂದ ತಪ್ಪಿಸಿಕೊಳ್ಳಲು ಊರ ಹೊರಗಣ ಗುಡ್ಡಗಳಲ್ಲಿರುವ ದೇವಸ್ಥಾನಗಳನ್ನು ನೋಡಲು ಹೋದಾಗ ಅಲ್ಲಿ ದೊರೆಯುವ ತೆಪ್ಪ ಎಂಬ ಹಸಿ ಇಲ್ಲವೇ ಒಣ ಹುಲ್ಲನ್ನು ಆಯ್ದು ತರುವ ಕೆಲಸ ನಮ್ಮದೇ.

ಈಗ ಹೇಳು! ವಿದ್ಯುನ್ಮಾನ ಯಂತ್ರಗಳೇ ಜೀವನ ಎಂದುಕೊಂಡು ಯಂತ್ರಗಳ ಜೊತೆ ಯಂತ್ರವಾಗಿ ಜೀವನ ಸಾಗಿಸುತ್ತಿರುವ ನೀವು ನಮ್ಮಷ್ಟು ಜೀವಂತಿಕೆಯ ಬದುಕನ್ನು ಸಾಧಿಸುತ್ತಿದ್ದೀರಾ ಎಂದು? ನಮ್ಮ ಆಟ ಪಾಠ, ಊಟ ನೋಟ ಬದುಕಿನ ಒಳನೋಟ ಮನರಂಜನೆಗಳು ನಾವು ಇರುವ ಪರಿಸರದಲ್ಲಿಯೇ ಇದ್ದವು.

ಸುಧೀರ್ಘವಾಗಿ ವಿವರಿಸಿದ ಅಜ್ಜನ ಮೇಲೆ ಅಭಿಮಾನ ಉಕ್ಕಿದ ಮೊಮ್ಮಗ ಆತನನ್ನು ಪ್ರೀತಿಯಿಂದ ತಬ್ಬಿ ಅಜ್ಜಾ! ಅದೆಷ್ಟು ಚಂದದ ಬಾಲ್ಯ ನಿಮ್ಮದು... ರಿಯಲಿ ಯು ಹ್ಯಾವ್ ಹ್ಯಾಡ್ ವಂಡರ್ಫುಲ್ ಗೋಲ್ಡನ್ ಡೇಸ್! ಎಂದು ಖುಷಿಯಿಂದ ಹೇಳಿದರೆ ಅಜ್ಜ ಮೊಮ್ಮಗನ ಮೈದಡವಿ ಕೆಲ ಘಳಿಗೆಗಳ ಕಾಲ ನನ್ನನ್ನು ನನ್ನ ಬಾಲ್ಯದ ದಿನಗಳನ್ನು ಮೆಲುಕು ಹಾಕಲು ನೀನು ಕಾರಣವಾದೆ ಎಂದು ಆರ್ದ್ರರಾಗಿ ಹೇಳಿದರು.

"ಮಗು! ನಾವು ಎರಡು ತಲೆಮಾರುಗಳ ನಡುವಿನ ಅಂತರವನ್ನು ಅರಿತವರಾಗಿದ್ದೇವೆ. ನಮ್ಮ ಜ್ಞಾನದ ಉಪಯೋಗ ಪಡೆದುಕೊಳ್ಳಿ, ನಮ್ಮಿಂದ ಕಲಿಯಿರಿ.. ಬಹುಶಹ ನಮ್ಮಂತೆ ನೀವು ಬದುಕಲು ಸಾಧ್ಯವಿಲ್ಲ,ಆದರೆ ನಮ್ಮ ಅನುಭವಗಳು ನಿಮಗೆ ದಾರಿ ದೀಪಗಳಾಗುತ್ತವೆ, ಹಳೆಯದೆಲ್ಲವೂ ತಪ್ಪು,ಹೊಸದೆಲ್ಲವೂ ಸರಿ ಎಂಬ ಭಾವನೆ ನಿಜವಲ್ಲ. ಹಳೆಯ ಮತ್ತು ಹೊಸ ವಿಷಯಗಳ ಸಂಗಮ ನೀವಾಗಬೇಕು. ಹಳೆಯ ಮೌಲ್ಯಗಳ ಜೊತೆ ಜೊತೆಗೆ ಆಧುನಿಕ ವಿಚಾರಧಾರೆಯ ಧನಾತ್ಮಕ ಅಂಶಗಳ ಮಾನವೀಯ ಪ್ರಜ್ಞೆ ನಿಮ್ಮದಾಗಬೇಕು. ಅಂತಹ ಅದ್ಭುತ ಜನಾಂಗ ನೀವಾಗುತ್ತೀರಲ್ಲವೇ ಎಂದು ಅಜ್ಜ ಪ್ರೀತಿಯಿಂದ ಮೊಮ್ಮಗನ ಮೈದಡವಿದಾಗ ಖಂಡಿತವಾಗಿಯೂ ಅಜ್ಜ ಎಂದು ತನ್ನ ಬಲ ಹೆಬ್ಬೆರಳನ್ನು ಮೇಲೆ ಮಾಡಿದ ಮೊಮ್ಮಗ.

# ಕಂಪ್ಯೂಟರ್ ಸೌಲಭ್ಯ ಪಡೆದುಕೊಳ್ಳಿ

## ಜಿಲ್ಲಾಧಿಕಾರಿ ನಿತೀಶ್ ಕೆ. ಹೇಳಿಕೆ | 9 ಶಾಲೆಗಳಿಗೆ ಕಂಪ್ಯೂಟರ್‌ಗಳು ವಿತರಣೆ




■ ಹಂಪಿ ಟೈಮ್ಸ್ ರಾಯಚೂರು

ಸಂಭವ್ ಫೌಂಡೇಶನ್ ಮೈಕ್ರೋಸಾಫ್ಟ್ ಫಿಲಾಂತ್ರಪೀಸ್ ವತಿಯಿಂದ ಜಿಲ್ಲೆಯಲ್ಲಿ ವಿನೂತನವಾದ ಕಾರ್ಯ ಕ್ರಮವಾಗಿದೆ. ಮೈಕ್ರೋಸಾಫ್ಟ್ ಕಂಪನಿಯಿಂದ ರಾಯಚೂರು ತಾಲೂಕಿನ 9ಶಾಲೆಗಳಿಗೆ ಕಂಪ್ಯೂಟರ್‌ಗಳನ್ನು ಕೊಡುಗೆ ಯಾಗಿ ನೀಡಿದ್ದು, ಅದರ ಸದುಪಯೋಗವನ್ನು ಎಲ್ಲ ಮಕ್ಕಳು ಪಡೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿ ನಿತೀಶ್ ಕೆ. ಅವರು ಹೇಳಿದರು.

ಅವರು ಆ.07ರ ಬುಧವಾರದಂದು ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಣದಲ್ಲಿ ಸಾಮಾಜಿಕ ಹೊಣೆಗಾರಿಕೆ ಅನುದಾನದ ಅಡಿಯಲ್ಲಿ ಸಂಭವ್ ಫೌಂಡೇಶನ್ ಮೈಕ್ರೋಸಾಫ್ಟ್ ಫಿಲಾಂತ್ರಪೀಸ್ ಇಂಡಿಯಾ ಸಹಯೋಗದೊಂದಿಗೆ ರಾಯಚೂರು ತಾಲೂಕಿನ 9ಶಾಲೆಗಳಿಗೆ ಕಂಪ್ಯೂಟರ್‌ಗಳ ಹಸ್ತಾಂತರ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾತನಾಡಿದರು.

ರಾಯಚೂರಿನ ತಾಲೂಕಿನ ದೇವಸೂಗೂರು ಸರ್ಕಾರಿ ಪ್ರೌಢ ಶಾಲೆ, ಪಂಚಾಮುಖಿ ಗಾಣಧಾಳ ಸರ್ಕಾರಿ ಪ್ರೌಢ ಶಾಲೆ, ಮರ್ಚೆಟಾಳ್ ಸರ್ಕಾರಿ ಪ್ರೌಢ ಶಾಲೆ, ಗುಂಜಳ್ಳಿ ಸರ್ಕಾರಿ ಪ್ರೌಢ ಶಾಲೆ, ಜೇಗರಕಲ್ ಸರ್ಕಾರಿ ಪ್ರೌಢ ಶಾಲೆ, ಮಟಮಾರಿ ಸರ್ಕಾರಿ ಪ್ರೌಢ ಶಾಲೆ, ಚಂದ್ರಬಂಡಾ ಸರ್ಕಾರಿ ಪ್ರೌಢ ಶಾಲೆ, ಸಿಂಗನೋಡಿ ಸರ್ಕಾರಿ ಪ್ರೌಢ ಶಾಲೆ, ಎಲೆಬಿಚ್ಚಾಲಿ ಸರ್ಕಾರಿ ಪ್ರೌಢ ಶಾಲೆಗಳಿಗೆ ಕಂಪ್ಯೂಟರ್‌ಗಳನ್ನು ನೀಡಲಾಗಿದ್ದು, ಇದು ವಿನೂತನ ಕಾರ್ಯಕ್ರಮ ವಾಗಿದ್ದು, ದಾನಿಗಳು ನೀಡಿದ ಸೌಲಭ್ಯವನ್ನು ಮಕ್ಕಳು ಸರಿಯಾಗಿ ಬಳಸಿಕೊಳ್ಳಬೇಕು. ಅಲ್ಲದೆ ಮಕ್ಕಳಿಗೆ ಸರಿಯಾಗಿ ಸದ್ಬಳಕೆ ಮಾಡುವಂತೆ ಅಧಿಕಾರಿಗಳು ಕ್ರಮವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಂಸ್ಥೆ ವತಿಯಿಂದ ಮಕ್ಕಳಿಗೆ ಅನುಕೂಲವಾಗುತ್ತೆ ಎಂಬ ಆಸೆಯಿಂದ ಕಂಪ್ಯೂಟರ್‌ಗಳನ್ನು ನೀಡಿದ್ದು, ಅವರ ಆಸೆಯನ್ನು ನಿರಾಶೆ ಮಾಡದೆ ಮಕ್ಕಳು ಚೆನ್ನಾಗಿ ಸದ್ಬಳಕೆ ಮಾಡಿಕೊಳ್ಳಬೇಕು ಕಂಪ್ಯೂಟರ್‌ನಲ್ಲಿ ಏನಾದರೂ ಸಣ್ಣಪುಟ್ಟ ಸಮಸ್ಯೆಗಳು ಬಂದಲ್ಲಿ ಕೂಡಲೇ ಅವರ ಗಮನಕ್ಕೆ ತಂದು ಸರಿಪಡಿಸಿಕೊಳ್ಳಬೇಕು. ರಾಯಚೂರು ತಾಲೂಕಿನಲ್ಲಿ ಹೊಸ ಬೆಳವಣಿಗೆಯಾಗಿದ್ದು, ಮಕ್ಕಳು ಕಂಪ್ಯೂಟರ್ ಕಲಿಯುವ ಮೂಲಕ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಈ ವೇಳೆ ಸಂಸ್ಥೆಯ ಪ್ರಾದೇಶಿಕ ವ್ಯವಸ್ಥಾಪಕರಾದ ಭಕ್ತವಾತ್ಸಲ್ ಮಾತನಾಡಿ, ಗ್ರಾಮೀಣ ಸಮುದಾಯಗಳು ಮತ್ತು ಶಾಲೆಗಳಲ್ಲಿ ಡಿಜಿಟಲ್ ವಿಭಜನೆಯನ್ನು ಕಡಿಮೆ ಮಾಡುವ ಬದ್ಧತೆಯೊಂದಿಗೆ ಮೊಟ್ಟ ಮೊದಲ ಡಿಜಿಟಲ್ ಕೌಶಲ್ಯ ಮತ್ತು ಕೃಷಿ–ಟೆಕ್ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಅಪೇಕ್ಷಿತ ಫಲಿತಾಂಶಗಳನ್ನು ಖಚಿತಪಡಿಸಿಕೊಳ್ಳಲು, ವಿದ್ಯಾರ್ಥಿಗಳು ಮತ್ತು ಶಿಕ್ಷಕರಲ್ಲಿ ಸೃಜನಶೀಲತೆ, ನಾವೀನ್ಯತೆ ಮತ್ತು ಪ್ರಾಯೋಗಿಕ ಅನುಭವವನ್ನು ಬೆಳೆಸಲು ಮತ್ತು ಆಧುನಿಕ ಕೃಷಿ ಚಟುವಟಿಕೆಗಳಲ್ಲಿ ಈ ಸಾಮರ್ಥ್ಯಗಳನ್ನು ನಿಯೋಜಿಸಲು ಸಹಾಯ ಮಾಡಲು ಮೈಕ್ರೋಬಿಟ್ ಟೂಲ್‌ಕಿಟ್‌ಗಳೊಂದಿಗೆ ಶಾಲೆಗಳಲ್ಲಿ ತಂತ್ರಜ್ಞಾನ–ಸಕ್ರಿಯಗೊಳಿಸಿದ ಕಂಪ್ಯೂಟರ್ ಲ್ಯಾಬ್‌ಗಳನ್ನು ನಿರ್ಮಿಸಲು ನಾವು ಲೇಸರ್–ಕೇಂದ್ರಿತರಾಗಿದ್ದೇವೆ. ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕಾಳಪ್ಪ ಬಡಿಗೇರ, ರಾಯಚೂರು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಚಂದ್ರಶೇಖರ ಭಂಡಾರಿ, ಸಂಸ್ಥೆಯ ರಾಜ್ಯ ಸಂಯೋಜಕ ರವಿ, ಸಂಸ್ಥೆಯ ಯೋಜನಾ ವ್ಯವಸ್ಥಾಪಕರಾದ ಅಮೆಯ್ಯ, ಸಂಸ್ಥೆಯ ತರಬೇತಿದಾರರಾದ ಸವಿತಾ, ನಂದಿನಿ, ರೇಣುಕಾ, ಅದಿತ್ಯ ಸೇರಿದಂತೆ ವಿವಿಧ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

# ಮಂಜೂರು ಭೂಮಿಯ ಪಹಣಿಯಲ್ಲಿ ಹೆಸರು ಸೇರ್ಪಡೆಗೆ ಮೀನಾಮೇಷ


■ ಹಂಪಿ ಟೈಮ್ಸ್ ಕೂಡ್ಲಿಗಿ

ತಾಲೂಕಿನ ಜಂಗಮ ಸೋವೇನಹಳ್ಳಿ ಗ್ರಾಮದ ದಲಿತ ಚಲವಾದಿ ಪಕೀರಪ್ಪ ಅವರಿಗೆ ಮಂಜೂರು ಮಾಡಿದ್ದ ಸರ್ಕಾರಿ ಭೂಮಿಯ ಪಹಣಿಯಲ್ಲಿ ಅವರ ಹೆಸರು ಸೇರ್ಪಡೆ ಮಾಡಬೇಕು ಎಂದು ಒತ್ತಾಯಿಸಿ ಕರ್ನಾಟಕ ದಲಿತ ರಕ್ಷಣಾ ವೇದಿಕೆಯ ಜಿಲ್ಲಾ ಸಮಿತಿಯ ಸದಸ್ಯರು ಮಂಗಳವಾರ ತಹಸೀಲ್ದಾರ್ ಎಂ.ರೇಣುಕಾ ಮುಖಾಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ತಾಲೂಕಿನ ಶಿವಪುರ ಗ್ರಾಮದ ಸರ್ವೆ ನಂ 17ರಲ್ಲಿ ಹಿಂದೆ 3 ಎಕರೆ ಭೂಮಿಯನ್ನು 1999ರಲ್ಲಿ ಕೂಡ್ಲಿಗಿ ತಹಸೀಲ್ದಾರರು ಪಕೀರಪ್ಪ ಅವರಿಗೆ ಮಂಜೂರು ಮಾಡಿದ್ದು, ಅಲ್ಲಿಂದ ಇಲ್ಲಿಯವರೆಗೂ ಅವರೆ ಸಾಗುವಳಿ ಮಾಡುತ್ತ ಬಂದಿದ್ದಾರೆ. ಅಲ್ಲದೆ ಪಹಣಿಯಲ್ಲಿ ತಮ್ಮ ಹೆಸರನ್ನು ಸೇರಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಅನೇಕ ಬಾರಿ ಅರ್ಜಿ ಸಲ್ಲಿಸುತ್ತ ಬಂದಿದ್ದರು ಅಧಿಕಾರಿಗಳು ಯಾವುದೇ ಕಿಮ್ಮತ್ತು ನೀಡದೇ, 2018ರಲ್ಲಿನಡೆದ ಬಗರ್ ಹುಕ್ಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಸರ್ವೆ 17ರಲ್ಲಿ 2 ಎಕರೆ 15 ಗುಂಟೆ ಜಮೀನನ್ನು ನಂದಿ ಕೊಟ್ರೇಶಪ್ಪ ಎನ್ನುವವರಿಗೆ ಮಂಜೂರು ಮಾಡಿದ್ದಾರೆ. ಆದರೆ ಚಲವಾದಿ ಪಕೀರಪ್ಪ ಅವರ ಹೆಸರನ್ನು ಸೇರ್ಪಡೆ ಮಾಡುವಂತೆ ಅನೇಕ ಬಾರಿ ಮನವಿ ಮಾಡಿದ್ದರು. ಪಕ್ಕೀರಪ್ಪ ಮರಣದ ನಂತರವೂ ಅವರ ಪತ್ನಿ ಬಸಮ್ಮ ಅವರು ತಮ್ಮ ಹೆಸರು ಸೇರ್ಪಡೆ ಮಾಡುವಂತೆ ಮನವಿ ಮಾಡಿ, ಬೇರೆಯವರಿಗೆ ಭೂಮಿ ಮಂಜೂರು ಮಾಡಿದ್ದರ ವಿರುದ್ಧ ನ್ಯಾಯಾಲಯದ ತಡೆಯಜ್ಞೆಯನ್ನು ತಂದಿದ್ದರು ಅಧಿಕಾರಿಗಳು ನಿರ್ಲಕ್ಷ್ಯ ಮಾಡಿದಾರೆ. ಇದರಿಂದ ದಲಿತ ಮಹಿಳೆ ಚಲವಾದಿ ಬಸಮ್ಮ ಅನ್ಯಾಯಕ್ಕೆ ಒಳಗಾಗಿದ್ದಾರೆ. ಇದನ್ನು ಸರಿ ಪಡಿಸಲು ತಕ್ಷಣ ಅಧಿಕಾರಿಗಳು ಸವರ್ಣಿಯರಿಗೆ ಮಂಜೂರು ಮಾಡಿದ ಭೂಮಿಯನ್ನು ರದ್ದು ಮಾಡಿ, ಪಹಣಿಯಲ್ಲಿ ಬಸಮ್ಮ

ಅವರ ಹೆಸರನ್ನು ಸೇರ್ಪಡೆ ಮಾಡಬೇಕು. ಅದೇ ರೀತಿ ಒಮ್ಮೆ ದಲಿತರಿಗೆ ಮಂಜೂರಾದ ಭೂಮಿಯನ್ನು ಮತ್ತೊಬ್ಬರಿಗೆ ಮಂಜೂರು ಮಾಡಿ ಗೊಂದಲ ಸೃಷ್ಟಿಸಿದ ಅಧಿಕಾರಿಗಳು ಹಾಗೂ ಮೇಲ್ವರ್ಗದದವರ ಮೇಲೆ ಪರಿಶಿಷ್ಟ ಜಾತಿ, ಪಂಗಡದ ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ತಹಸೀಲ್ದಾರ್ ಎಂ. ರೇಣುಕಾ ಮನವಿ ಪತ್ರ ಸ್ವೀಕರಿಸಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಶಂಕರ್ ನಂದಿಹಾಳ್, ಜಿಲ್ಲಾ ಕಾರ್ಯಧ್ಯಕ್ಷ ಹನುಮೇಶ್ ಕಟ್ಟಿಮನಿ, ಚಲವಾದಿ ಬಸಮ್ಮ, ತಾಲೂಕು ಅಧ್ಯಕ್ಷ ನಾಗರಾಜ, ಮಲ್ಲಿಕಾರ್ಜುನ ಸ್ವಾಮಿ, ಸಿ.ಎಂ. ಬಸಮ್ಮ, ತಳವಾರ ಬಸವರಾಜ, ಸಿ.ಎಂ. ನಾಗಯ್ಯ, ಸಿ.ಎಂ. ಸಂಗಯ್ಯ, ಎಸ್. ಈರಣ್ಣ, ಶಂಕ್ರಿ ಶಿವಾನಂದಪ್ಪ, ಸಿ.ಎಂ. ಮಲ್ಲಿಕಾರ್ಜುನಯ್ಯ, ವಡೇರಹಳ್ಳಿ ಶರಣಪ್ಪ ಭಾಗಿಯಾಗಿದ್ದರು.



ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ। ಸಂವತ್ಸರ: ಕ್ರೋಧಿ

**08–08–2024 – ಗುರುವಾರ**

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉತ್ತರ(ಫಾಲ್ಗುಣಿ) |
| ಯೋಗ | : ಶಿವ |
| ಕರಣ | : ವಾಣಿಜ |
| ಸೂರ್ಯೋದಯ | : 06:01:43 |
| ಸೂರ್ಯಾಸ್ತ | : 19:03:02 |
| ರಾಹು | : 14:10–15:48 |
| ಯಮಘಂಡ | : 06:02–07:39 |
| ಗುಳಿಕ | : 09:17–10:55 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 07–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.50 ಅಡಿ |
| ಒಳ ಹರಿವು | 67394 ಕ್ಯುಸೆಕ್ |
| ಹೊರ ಹರಿವು | 50302 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 103.780 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1627.66 ಅಡಿ |
| ಒಳ ಹರಿವು | 12582 ಕ್ಯುಸೆಕ್ |
| ಹೊರ ಹರಿವು | 7976 ಕ್ಯುಸೆಕ್ |
| ಸಾಮರ್ಥ್ಯ | 85.535 ಟಿಎಂಸಿ |

# ಹಿಂಬಡ್ತಿ ವಿರೋಧಿಸಿ ಪ್ರತಿಭಟನೆ

## ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಇಲಾಖೇತರ ಕೆಲಸದಿಂದ ಮಕ್ಕಳ ಶೈಕ್ಷಣಿಕ ಮಟ್ಟ ಕುಸಿತ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಪ್ರಾಥಮಿಕ ಶಾಲಾ ಶಿಕ್ಷಕರ ನಾನಾ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕದ ವತಿಯಿಂದ ಬುಧವಾರ ಶಿರಸ್ತೆದಾರ್ ಎಸ್.ಚಂದ್ರಶೇಖರ್ ಗೆ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆ ನೇತೃತ್ವವಹಿಸಿ ಶಿಕ್ಷಕರ ಸಂಘದ ಜಿಲ್ಲಾ ಕಾರ್ಯದರ್ಶಿ ಬಿ.ಬಿ. ಶಿವಾನಂದ ಮಾತನಾಡಿ ಸರ್ಕಾರವು 2016ಕ್ಕೂ ಮುನ್ನ ನೇಮಕವಾದ ಶಿಕ್ಷಕರ ಸೇವಾಜೇಷ್ಠತೆ ಗೌರವಿಸಿ ಬಡ್ತಿ ನೀಡುವ ಬದಲು 1ರಿಂದ 5ನೇ ತರಗತಿ ಶಿಕ್ಷಕರೆಂದು ಪರೋಕ್ಷವಾಗಿ ಹಿಂಬಡ್ತಿ ನೀಡಿ ಅವಮಾನ ಮಾಡಿದೆ. ಸ್ವಾಭಾವಿಕ ನ್ಯಾಯವನ್ನು ಉಲ್ಲಂಘಿಸಿ ಶಿಕ್ಷಕರನ್ನು ಬೀದಿಗಿಳಿಸಿರುವುದು ದುರದೃಷ್ಟಕರ. 2016 ಕ್ಕೂ ಮುನ್ನ ನೇಮಕವಾದ ಶಿಕ್ಷಕರಿಗೆ 2017ರಲ್ಲಿ ಜಾರಿಯಾದ ನಿಯಮಗಳನ್ನು ಪೂರ್ವಾನ್ವಯ ಮಾಡಲೇಬಾರದು. ಪ್ರಾಥಮಿಕ ಶಾಲಾ ಮುಖ್ಯ ಗುರುಗಳು, ಹಿರಿಯ ಮುಖ್ಯಗುರುಗಳು ಹಾಗೂ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್ 2 ಹುದ್ದೆಗಳಿಗೆ 2016 ಕ್ಕೂ ನೇಮಕವಾದ ಶಿಕ್ಷಕರನ್ನೇ ಪರಿಗಣಿಸುವ ಮೂಲಕ ನ್ಯಾಯ ಒದಗಿಸಬೇಕು ಎಂದು ಸಂಘವು ಒತ್ತಾಯಿಸುತ್ತದೆ. ಮತ್ತು ಈ ವಿಷಯದಲ್ಲಿ ನ್ಯಾಯ ದೊರಕುವವರೆಗೂ ನಿರಂತರ ಹೋರಾಟ ಮಾಡಲು ಸಂಘ ಮತ್ತು ಶಿಕ್ಷಕರು ಸನ್ನದ್ಧರಾಗಿದ್ದಾರೆ ಎಂದು ಎಚ್ಚರಿಸಿದರು.

ತಾಲೂಕು ಅಧ್ಯಕ್ಷ ಗೌಡ್ರು ಕೊಟ್ರೇಶ್ ಮಾತನಾಡಿ, ಬೋಧಿಸಲು ನೇಮಕವಾದ ಶಿಕ್ಷಕರಿಗೆ ಇಲಾಖೇತರ ಕೆಲಸಗಳನ್ನು ನೀಡಿ ಮಕ್ಕಳ ಶೈಕ್ಷಣಿಕ ಬೆಳವಣಿಗೆ ಕುಂಠಿತಗೊಳ್ಳುವಂತೆ ನಡೆಸಿಕೊಳ್ಳಲಾಗುತ್ತಿದೆ. ಮತಗಟ್ಟೆ ಅಧಿಕಾರಿಗಳ ನ್ನಾಗಿ ನೇಮಿಸಿ ಶಿಕ್ಷಕರ ಬೋಧನಾ ಸಮಯವನ್ನು ಕಸಿದುಕೊಳ್ಳಲಾಗುತ್ತಿದೆ. ಶಿಕ್ಷಕರಿಗೆ ಮತಗಟ್ಟೆ ಕೆಲಸದಿಂದ ಮುಕ್ತಿ ಕೊಡಬೇಕು. ಮತ್ತು ಇಲ್ಲಿಯವರೆಗೂ ಕರ್ತವ್ಯ ನಿರ್ವಹಿಸಿದ ಶಿಕ್ಷಕರಿಗೆ ನಿಯಮಾನುಸಾರ ಗಳಿಕೆ ರಜೆ, ಗೌರವಧನ ನೀಡಬೇಕು ಎಂದು ಮನವಿ ಮಾಡಿದರು.

ಶಿಕ್ಷಕರ ಸಂಘದ ಜಿಲ್ಲಾ ಉಪಾಧ್ಯಕ್ಷೆ ಗೀತಾ ವಿ, ತಾಲೂಕು ಕಾರ್ಯದರ್ಶಿ ಶೇಖರಯ್ಯ ಟಿ ಹೆಚ್ ಎಂ, ಕೋಶಾಧ್ಯಕ್ಷ ನಂದೀಶ್ವರನಾಯ್ಕ್ ಎಲ್, ಉಪಾಧ್ಯಕ್ಷರಾದ ಹನುಮಂತಪ್ಪ ಹೆಚ್ ಜಿ, ಇಂದಿರಾ ಹೆಚ್, ಸಹ ಕಾರ್ಯದರ್ಶಿಗಳಾದ ಬಿ.ಜಿ. ಪಾಟೀಲ್, ಗೀತಾ ಭಾಪ್ರಿ, ಸಂಘಟನಾ ಕಾರ್ಯದರ್ಶಿಗಳಾದ ಗೋಣಿಬಸಪ್ಪ ಹೆಚ್, ಶಾಂತಕುಮಾರಿ ಎಸ್, ಪದಾಧಿಕಾರಿಗಳಾದ ಕೊತ್ಲಪ್ಪ ಪಿ ವಿ, ಎರಿಸ್ವಾಮಿ ಕೆ, ಕೆ. ಜಿನಾಬಿ, ಪುಟ್ಟಪ್ಪ ಎನ್, ನೌಕರರ ಸಂಘದ ಉಪಾಧ್ಯಕ್ಷ ಅಜ್ಜನಗೌಡ, ಖಜಾಂಚಿ ಆರ್.ಬಿ. ಬಸವರಾಜ, ವಿವಿಧ ಸಂಘಟನೆಗಳ ಪದಾಧಿಕಾರಿ ಗಳಾದ ಸಿದ್ದೇಶ್ವರ, ದಯಾನಂದ ಎಲ್, ಅಂಗಡಿ ತಿಪ್ಪೇಸ್ವಾಮಿ, ಮಾರಪ್ಪ ಬಿ, ಹಾಗೂ ನೂರಾರು ಶಿಕ್ಷಕರು ಉಪಸ್ಥಿತರಿದ್ದರು.

# ಜಿಲ್ಲಾಮಟ್ಟದ ಯೋಗಾಸನ ಸ್ಪರ್ಧೆ

## ಆ.11ರಂದು, ಪುರುಷ–ಮಹಿಳೆಯರಿಗೆ ಪ್ರತ್ಯೇಕ ಸ್ಪರ್ಧೆ

■ **ಹಂಪಿ ಟೈಮ್ಸ್ ಕೂಡ್ಲಿಗಿ**

ಪಟ್ಟಣದ ಸಂಡೂರು ರಸ್ತೆಯ ಜ್ಞಾನಭಾರತಿ ವಿದ್ಯಾಸಂಸ್ಥೆಯಲ್ಲಿ ಆ.11ರಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ವಿಜಯನಗರ ಜಿಲ್ಲೆ ಯೋಗಾಸನ ಸ್ಪೋರ್ಟ್ಸ್ ಅಸೋಸಿಯೇಷನ ಹಾಗೂ ಕೂಡ್ಲಿಗಿಯ ಸೃಷ್ಟಿ ಯೋಗ ಚಿಕಿತ್ಸಾ ಕೇಂದ್ರದ ಸಹಯೋಗದಲ್ಲಿ ವಿಜಯನಗರ, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲಾಮಟ್ಟದ ಯೋಗಾಸನ ಸ್ಪರ್ಧೆ ಆಯೋಜಿಸಲಾಗಿದೆ.

ಸ್ಪರ್ಧೆಯು ಸಬ್ ಜೂನಿಯರ್ ವಿಭಾಗ (10 ರಿಂದ 14 ವರ್ಷ), ಜೂನಿಯರ್ ವಿಭಾಗ (14 ರಿಂದ 18 ವರ್ಷ), ಸೀನಿಯರ್ ವಿಭಾಗ (18 ರಿಂದ ಮತ್ತು ಮೇಲ್ಪಟ್ಟವರು), ಮಾಸ್ಟರ್ಸ್ ವಿಭಾಗ (36 ರಿಂದ 45 ವರ್ಷ), ವೇಟನ ವಿಭಾಗ (45 ರಿಂದ 55ವರ್ಷ) ಸೇರಿ ಒಟ್ಟು 5 ವಿಭಾಗಗಳಲ್ಲಿ ನಡೆಯಲಿದ್ದು, 11 ರ ಬೆಳಿಗ್ಗೆ 8 ಗಂಟೆಯಿಂದಲೇ ಸ್ಪರ್ಧೆ ಆರಂಭಗೊಳ್ಳಲಿವೆ. ಪ್ರತಿ ವಿಭಾಗದಲ್ಲಿ ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ಸ್ಪರ್ಧೆ ಇರಲಿದ್ದು, ನೋಂದಣಿ ಹಾಗೂ ಹೆಚ್ಚಿನ ವಿವರಗಳಿಗೆ ಜಿಲ್ಲಾ ಸಂಯೋಜಕಿ ಎನ್.ಎಲ್.ಸುಮಲತಾ, ಮೊಬೈಲ್ ಸಂಖ್ಯೆ 9538722430 ಸಂಪರ್ಕಿಸಲು ಕೋರಿದ್ದಾರೆ.

**ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ**

ರಿ.ನಂ : ಸನಿ 23/1/1341/08–09, ಡೋರ್ ನಂ. 330/26, ತೇರಿನ ಬೀದಿ, ಮೇನ್‌ಬಜಾರ್ ಹೊಸಪೇಟೆ–583201
ದೂರವಾಣಿ – 9901517809

**17ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸ್**

ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಹೊಸಪೇಟೆ. ಇದರ 17ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ **24/08/2024 ಶನಿವಾರ ಬೆಳ್ಳಿಗೆ 11:00 ಗಂಟೆಗೆ** ಸರಿಯಾಗಿ ಕಛೇರಿಯ ಆವರಣದಲ್ಲಿ ನಡೆಯಲಿದೆ. ಕಾರಣ ಎಲ್ಲಾ ಅರ್ಹ ಸದಸ್ಯರು ಈ ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಾಗಬೇಕೆಂದು ಕೋರಲಾಗಿದೆ.

ದಿನಾಂಕ: 08–08–2024
ಸ್ಥಳ: ಹೊಸಪೇಟೆ

ಸಹಿ/– ಆಡಳಿತ ಮಂಡಳಿಯ ಪರವಾಗಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

**ಸೂಚನೆ: ಎಲ್ಲಾ ಅರ್ಹ ಸದಸ್ಯರಿಗೆ ಸಭೆಯ ತಿಳುವಳಿಕೆ ಪತ್ರ ಕಳುಹಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ತಲುಪದೇ ಇದ್ದಲ್ಲಿ ಈ ನೋಟೀಸನ್ನು ಮಹಾಸಭೆಯ ತಿಳುವಳಿಕೆ ಪತ್ರವೆಂದು ಪರಿಗಣಿಸಿ ಸಭೆಗೆ ಹಾಜರಾಗಬೇಕೆಂದು ಕೋರಿದೆ.**

# ಉಪನ್ಯಾಸಕರ ಸಮಯಪ್ರಜ್ಞೆ, ಶಿಸ್ತು ವಿದ್ಯಾರ್ಥಿಗಳಿಗೆ ಆದರ್ಶವಾಗಲಿ

## ನಿವೃತ್ತ ಪ್ರಾಧ್ಯಾಪಕ ಡಾ.ಗಂಗಾಧರಯ್ಯ ಹಿರೇಮಠ್ ಹೇಳಿಕೆ | ಶೈಕ್ಷಣಿಕ ಸಮಾವೇಶ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಉಪನ್ಯಾಸಕರು ಸಮಯ ಮತ್ತು ಶಿಸ್ತನ್ನು ಪಾಲಿಸಿ ನಿಮ್ಮ ವಿದ್ಯಾರ್ಥಿಗಳು ಸಮಾಜದಲ್ಲಿ ಆದರ್ಶರಾಗುತ್ತಾರೆ ಎಂದು ದಾವಣಗೆರೆಯ ನಿವೃತ್ತ ಪ್ರಾಧ್ಯಾಪಕರಾದ ಡಾ.ಗಂಗಾಧರಯ್ಯ ಹಿರೇಮಠ್ ಉಪನ್ಯಸಕರಿಗೆ ಕಿವಿಮಾತು ಹೇಳಿದರು.

ಪಟ್ಟಣದ ಗುರುಭವನದಲ್ಲಿ ವಿಜಯನಗರ ಜಿಲ್ಲಾ ಪ.ಪೂ.ಕಾಲೇಜ್‌ಗಳ ಪ್ರಾಚಾರ್ಯರ ಮತ್ತು ಉಪನ್ಯಾಸಕರ ಹಾಗೂ ಇಲ್ಲಿಯ ವಿದ್ಯಾನಿಕೇತನ ಕಾಲೇಜ್ ಸಹಯೋಗ ದೊಂದಿಗೆ ಬುಧವಾರ ಹಮ್ಮಿಕೊಂಡಿದ್ದ, ಕಾಲೇಜ್‌ಗಳ ನಿವೃತ್ತ ನೌಕರರಿಗೂ ಹಾಗೂ ವಿದ್ಯಾರ್ಥಿಗಳಿಗೂ ಸನ್ಮಾನ ಮತ್ತು ಶೈಕ್ಷಣಿಕ ಸಮಾವೇಶದಲ್ಲಿ ಅವರು ಉಪನ್ಯಾಸ ನೀಡಿ ಮಾತನಾಡುತ್ತಿದ್ದರು. ಉಪನ್ಯಾಸಕರ ಉತ್ತಮ ಸೇವೆಯಿಂದ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಹಾದಿಗೆ ಸುಗಮವಾಗುತ್ತೆ. ನಿಮ್ಮ ಕರ್ತವ್ಯ ನೀವು ಮರೆಯಬೇಡಿ ಎಂದು ಕರ್ತವ್ಯ ಪ್ರಜ್ಞೆ ಮೂಡಿಸಿದರು.

ಅವಳಿ ಜಿಲ್ಲೆಗಳ ಪ.ಪೂ.ಕಾಲೇಜ್‌ಗಳ ಉಪನಿರ್ದೇಶಕರಾದ ಟಿ.ಘಾಲಾಕ್ಷರವರು ಕಾರ್ಯಕ್ರಮ ಉದ್ಘಾಟಿಸಿ, ಕಾಲೇಜ್‌ಗಳಲ್ಲಿ ಉತ್ತಮ ಫಲಿತಾಂಶಕ್ಕಾಗಿ ಗುಣಮಟ್ಟದ ಶಿಕ್ಷಣ ನೀಡಿ, ಕಾಲೇಜ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಏರಿಕೆ ಮುಖ್ಯವಲ್ಲ, ಗುಣಮಟ್ಟದ ಶಿಕ್ಷಣ ಮುಖ್ಯ. ಅದರಂತೆ ವಿದ್ಯಾರ್ಥಿಗಳು ಉತ್ತಮ ಫಲಿತಾಂಶದೊಂದಿಗೆ ಕೀರ್ತಿ ವಂತರಾಗಿ, ಉನ್ನತ ಶಿಕ್ಷಣ ಮತ್ತು ಉದ್ಯೋಗ ಗಳನ್ನು ಪಡೆಯುವಂತೆ ಕರೆ ನೀಡಿದರು.



ಪ್ರಾಚಾರ್ಯರ ಸಂಘದ ಜಿಲ್ಲಾಧ್ಯಕ್ಷ ನಾಗರಾಜ್ ಸಿ.ಹವಲ್ದಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಜಿಲ್ಲೆಯಲ್ಲಿ ಎಲ್ಲಾ ಕಾಲೇಜ್‌ಗಳ ಉಪನ್ಯಾಸಕರ, ಪ್ರಾಚಾರ್ಯರ ಸಂಘಟನೆ ಸಮಾಜಮುಖಿ ಸೇವೆ ಮಾಡೋಣ, ಪ್ರತಿ ವರ್ಷ ನಿವೃತ್ತರಾಗುವ ನೌಕರರಿಗೆ ಹಾಗೂ ಉತ್ತಮ ಸಾಧನೆ ಮಾಡಿವ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಇದೇ ವೇದಿಕೆಯಲ್ಲಿ ನಿವೃತ್ತರಾದ ವಿಜಯನಗರ ಜಿಲ್ಲೆಯ ಕಾಲೇಜ್‌ಗಳ ನೌಕರರು, ಉತ್ತಮ ಫಲಿತಾಂಶ ಪಡೆದ ವಿದ್ಯಾರ್ಥಿಗಳಿಗೆಸನ್ಮಾನಿಸಿಗೌರವಿಸಲಾಯಿತು.

ಪ್ರಾಸಚಾರ್ಯರ ಮತ್ತು ಉಪನ್ಯಾಸಕರ ಸಂಘಗಳ ಪದಾಧಿಕಾರಿಗಳಾದ ವಿದ್ಯಾನಿಕೇತನ ಕಾಲೇಜ್‌ನ ಪಿ.ಶರತ್‌ಚಂದ್ರ, ಬಳ್ಳಾರಿಯ ಶ್ರೀಶೈಲ, ಶಿವರಾಮ್, ಎಂ.ಆರ್. ಶೇಖರ್, ಕೆ.ಬಿ.ಎಂ. ನಾಗಲಿಂಗಸ್ವಾಮಿ, ಎಂ.ಟಿ.ಗಿರೀಶ್, ಡಾ.ಎಂ.ಕೆ.ದುರುಗಪ್ಪ, ಡಾ.ರಾಜಣ್ಣ, ಗೂಳಪ್ಪ, ಮಲ್ಲಿಕಾರ್ಜುನ ಎಫ್ ಹುಗ್ಗಿ ಇನ್ನೂ ಮುಂತಾದವರಿದ್ದರು.

ಉಪನ್ಯಾಸಕ ಗೌಡರ ಬಸವರಾಜ್, ಹೊಸಪೇಟೆಯ ಪಾರ್ವತಿ, ಕೊಟ್ಟೂರಿನ ಡಾ.ಜಗದೀಶ ಚಂದ್ರ ಭೋಸ್ ಮತ್ತು ದಯಾನಂದ ಕಿನ್ನಾಳ್ ನಿರ್ವಹಿಸಿದರು.

# ಪಿಎಸ್‌ಐ ಪರುಶುರಾಮ ಕುಟುಂಬಕ್ಕೆ ಆರ್ಥಿಕ ನೆರವು, ಸರ್ಕಾರಿ ಉದ್ಯೋಗ: ಡಾ ಜಿ.ಪರಮೇಶ್ವರ

■ **ಹಂಪಿ ಟೈಮ್ಸ್ ಕೊಪ್ಪಳ**

ಇತ್ತೀಚೆಗೆ ಮೃತಪಟ್ಟ ಸಬ್‌ಇನ್ಸ್‌ಕ್ಟರ್ ಪರುಶುರಾಮ್ ಅವರ ನಿವಾಸಕ್ಕೆ ಗೃಹ ಸಚಿವರಾದ ಡಾ ಜಿ.ಪರಮೇಶ್ವರ ಅವರು ಆಗಸ್ಟ್ 07ರಂದು ಭೇಟಿ ನೀಡಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಮತ್ತು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷರು ಮತ್ತು ಶಾಸಕರಾದ ಪ್ರಸಾದ ಅಬ್ಬಯ್ಯಾ ಅವರೊಂದಿಗೆ ಕೊಪ್ಪಳ ಜಿಲ್ಲೆಯ ಕಾರಟಗಿ ತಾಲ್ಲೂಕಿನ ಸೋಮನಾಳ ಗ್ರಾಮದಲ್ಲಿರುವ ಪರುಶುರಾಮ್ ಅವರ ಮನೆಗೆ ತೆರಳಿದ ಗೃಹ ಸಚಿವರು, ಮೃತ ಪರುಶುರಾಮ್ ಅವರ ತಂದೆ ಜನಕಮುನಿ, ತಾಯಿ ಗಂಗಮ್ಮ, ಪತ್ನಿ ಶ್ವೇತಾ, ಸಹೋದರ ಹನುಮಂತ ಹಾಗೂ ಕುಟುಂಬದ ಇತರೆ ಸದಸ್ಯರಿಗೆ ಸಾಂತ್ವನ ಹೇಳಿದರು.



ಪರುಶುರಾಮ್ ಅವರ ಕುಟುಂಬಕ್ಕೆ ರಾಜ್ಯ ಸರ್ಕಾರದಿಂದ 50 ಲಕ್ಷ ರೂ. ಆರ್ಥಿಕ ನೆರವು ನೀಡಲು ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ಕೂಡಲೇ ಕ್ರಮಕೈಗೊಳ್ಳಲಾಗುವುದು. ಇದಲ್ಲದೆ ಮೃತರ ಪತ್ನಿಗೆಸರ್ಕಾರಿಉದ್ಯೋಗನೀಡಲಾಗುವುದು. ಶ್ವೇತಾ ಅವರು ಬಿಇ ಎಲೆಕ್ಟ್ರಾನಿಕ್ ಪದವಿ ಹೊಂದಿರುವುದರಿಂದ ಜೆಸ್ಕಾಂ ಅಥವಾ ರಾಯಚೂರು ವಿಶ್ವವಿದ್ಯಾಲಯದಲ್ಲಿ ಉದ್ಯೋಗ ನೀಡುವಂತೆ ಮನವಿ ಮಾಡಿಕೊಂಡಿದ್ದಾರೆ. ಈ ಬಗ್ಗೆ ಸರ್ಕಾರದಿಂದ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಪೊಲೀಸ್ ಇಲಾಖೆಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರಾದ ಆರ್.ಹಿತೇಂದ್ರ, ಬಳ್ಳಾರಿ ವಲಯದ ಪೊಲೀಸ್ ಮಹಾ ನಿರೀಕ್ಷಕರಾದ ಲೋಕೇಶ್ ಕುಮಾರ್, ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ರಾಮ್ ಎಲ್ ಅರಸಿದ್ದಿ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಆರ್.ಹೇಮಂತ್ ಕುಮಾರ್, ಗಂಗಾವತಿ ಡಿವೈಎಸ್ಪಿ ಸಿದ್ದನಗೌಡ ಪಾಟೀಲ್, ಕಾರಟಗಿ ಪೊಲೀಸ್ ಅಧಿಕಾರಿಗಳು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

**SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ**

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

SSLC English Hampi Times Margadarshi - 2024-25

## Supplementary Reading: Narayanpur Incident

**Most important 2 or 3 marks questions and answers.**

**Q1. What had the police expected about the way of protest? How did the student leaders manage the protest? (April, 2017, Oct, 2015; Jan, 2015 March )**

**Ans:** The police had expected a violent protest from the students. They wanted them to behave in a violent way that they could beat them up and put them away in jail. But the students had decided that they would Indulge in any such activity which could lead to their arrest. So they marched peacefully without raising shouts or slogans

**Q.2. How was the students marching an unusual march?**

Ans: The students had been marching to meet D.S.P. Though, there were policemen the students marched as if the police did not exist. They walked in complete silence. There were no slogans, no shouts, just the schuffle of the feet. The drip of rain and low murmur from the watching crowd.

**Q. 3. Why had Patil, the sub-inspector come there? Who believed him ? What was the result ?**

**Ans:** Patil, the sub-inspector of police, was a good friend of Mohan's father. He had come to their house to warn them of a search which might take place any time. The search was for a cyclostyling machine. Amma believed him and handed over the machine to him to avoid any kind of inconvenience.

**Q. 4. How did the student leaders manage the protest? Why did they do so ?**

**Ans:** The student leaders managed the protest by taking out an unusual march. They walked complete silence without raising any slogans or shouts. It was a silent agitation which did not trouble the police.They did so because one of their teachers, who was a follower of Gandhiji had been arrested. They knew that if they turned violent, they might get beaten up and arrested by the police.

**Q. 5. Why were Babu and Manju disappointed with the students' march? (Jan 2015)**

**Ans:** Babu and Manju were a bit disappointed with the silent march of the students. They were expecting slogans and shouts as normally a protest has but the march had ended peacefully without any violence. Even aggression was not seen on the protesters' faces.

**Q. 6. Why were the students marching in the street ? Why was it termed uncommon? (Nov 2014)**

**Ans:** The students had been marching because one of their teachers, who was a follower of Gandhiji, had been arrested. They were protesting against his arrest. It was an unusual march because they walked in complete silence. They did not raise any slogans or shouts.

www.hampitimes.com - Hampi Times Margadarshi

### Profile Writing

**Given below is a profile. Write a paragraph using the clues given below :**

**Name :** Sarojini Naidu
**Date of Birth :** 13th February 1879, Hyderabad
**Parents :** Aghoranath Chattopadhyaya , Varada Sundari Devi.
**Education :** University of Madras, King's college London
**Notable works :** In the Bazaars of Hyderabad, The Golden Threshold Associations, Indian National Congress.

**Paragraph :** Sarojini Naidu was a great feedom fighter and poetess. She was born on 13th February, 1879 in Hyderabad. Her parents were Aghoranath Chattopadhyaya and Varada Sundari, a Bengali poetess. She was educated at the university of Madras and King's college in London. Her notable works are 'In the Bazaars of Hyderabad' and 'The Golden Threshold.' She was in association with Indian National Congress.

Prepared by : **Vanitha.H.M.** English Teacher. G.H.S. Bannigola Hagaribommanahalli Taluk, Vijayanagara Dist

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055